₹ 4 | ಪುಟ: 4 | ಸಂಪುಟ: 4 | ಸಂಚಿಕೆ 74 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

Volume : 4 | Issue: 74 | Thursday, 04, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

## ಬಹುಮತದ ಬಿಜೆಪಿ ಸರ್ಕಾರ ಅಧಿಕಾರಕ್ಕೆ: ಪ್ರಧಾನಿ ಮೋದಿ





ಬೆಳಗಾವಿ: ಬಿಜೆಪಿಗೆ ಬಹುಮತ ನೀಡಲು ರಾಜ್ಯದ ಜನ ತೀರ್ಮಾನಿಸಿದ್ದಾರೆ. ಕರ್ನಾಟಕದ ಜನರು ಸ್ಥಿರ ಸರ್ಕಾರ ತರಲು ನಿರ್ಧರಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಬೈಲಹೊಂಗಲದಲ್ಲಿ ಚುನಾವಣಾ ಬಹಿರಂಗ ಸಮಾವೇಶದಲ್ಲಿ ಮಾತನಾಡುತ್ತಾ, ಅಭಿವೃದ್ಧಿ ಎಂಬ ರಸ್ತೆಯಲ್ಲಿ ದೇಶ ಮುಂದೆ ಸಾಗುತ್ತಿದೆ. ಬಿಜೆಪಿ ಸರ್ಕಾರ ಪ್ರತಿಯೊಬ್ಬರ ಏಳಿಗೆಗೆ ಶ್ರಮಿಸುತ್ತಿದೆ. ಹೀಗಾಗಿ ಜನರು ಬಿಜೆಪಿ ಮೇಲೆ ವಿಶ್ವಾಸ ಇಟ್ಟಿದ್ದಾರೆ. ದೇಶದ ಪ್ರತಿಯೊಬ್ಬರಿಗೂ ಮೂಲಭೂತ ಸೌಕರ್ಯ ನೀಡಬೇಕು ಎಂಬುದು ಬಿಜೆಪಿಯ ಉದ್ದೇಶವಾಗಿದೆ ಎಂದು ಪ್ರಧಾನಿ ಹೇಳಿದರು.

ಕಾಂಗ್ರೆಸ್ ಹಾಗೂ ಜೆಡಿಎಸ್ನದ್ದು ಶಾರ್ಟ್ಕಟ್ ರಾಜಕೀಯ ಕಾಂಗ್ರೆಸ್ ಹಾಗೂ ಜೆಡಿಎಸ್ನದ್ದು ಶಾರ್ಟ್ಕಟ್ ರಾಜಕೀಯ. ಈ ಬಗ್ಗೆ ಜನರು ಎಚ್ಚರಿಕೆಯಿಂದ ಇರಿ. ಈ ಎರಡು ಪಕ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುವುದಿಲ್ಲ. ಬರೀ ವೋಟ್ ಬ್ಯಾಂಕ್ ರಾಜಕೀಯ ಮಾಡುತ್ತಿವೆ. ಸಮಾಜ ಒಡೆಯುತ್ತಾ, ಜಾತಿ-ಜಾತಿಗಳ ನಡುವೆ ವಿಷಬೀಜ ಬಿತ್ತುವ ಕೆಲಸವನ್ನು ಕಾಂಗ್ರೆಸ ಹಾಗೂ ಜೆಡಿಎಸ್ ಪಕ್ಷಗಳು ಮಾಡುತ್ತಿವೆ ಎಂದು ಹೇಳಿದರು. ಈ ಮೂಲಕ ಪ್ರಧಾನಿ ಮೋದಿ ಕಿಡಿಕಾರಿದರು.

**ಜೆಡಿಎಸ್, ಕಾಂಗ್ರೆಸ್ ವಿರುದ್ಧ ವಾಗ್ದಾಳಿ**

ಕರ್ನಾಟಕದ ಜನರು ಕಾಂಗ್ರೆಸ್-ಜೆಡಿ-ಎಸ್‌ನ ಶಾರ್ಟ್ಕಟ್ ಸರ್ಕಾರದ ಬಗ್ಗೆ ಎಚ್ಚರವಾಗಿರಬೇಕು. ಶಾರ್ಟ್ಕಟ್ ರಾಜ-ಕಾರಣ ಮಾಡುವುದು ಅಂದರೆ ಸಮಾಜವನ್ನು ವಿಭಜಿಸಿದಂತೆ. ಇಂತಹ ರಾಜಕೀಯ ಮಾಡುವವರು ಒಡೆದು ಆಳುವ ನೀತಿ ಅನುಸರಿಸುತ್ತಾರೆ. ಇದು ವಿಕಾಸದ ದಾರಿ ಆಗುವುದಿಲ್ಲ. ಈ ಶಾರ್ಟ್ಕಟ್ ರಾಜಕಾರಣದ ಮುಂದಿನ ಪೀಳಿಗೆಗೆ ಹಸ್ತಾಂತರವಾಗಬಾರದು. ಇಂದಿನ ಯುವ ಪೀಳಿಗೆ ಶಾರ್ಟ್ಕಟ್ನವರ ಕೈಗೆ ಅಧಿಕಾರ ಕೊಡುವುದಿಲ್ಲ ಎಂದು ಟಾಂಗ್ ಕೊಟ್ಟರು.ಶಾರ್ಟ್ಕಟ್ ರಾಜ-ಕಾರಣ ಮಾಡುವವರಿಗೆ ಪ್ರಾದೇಶಿಕ ಅಸಮಾನತೆ ಅರಿವು ಇರಲಿಲ್ಲ. ಆದರೆ ಈ ಅಸಮಾನತೆ ಹೋಗಲಾಡಿಸಿ, ಬಿಜೆಪಿ ಸಮತೋಲನದ ಆಡಳಿತ ಮಾಡುತ್ತಿದೆ. ಒಗ್ಗಟ್ಟಿನಲ್ಲಿ ಕರ್ನಾಟಕ ಸರ್ಕಾರದ ಭವಿಷ್ಯ ಇದೆ. ಆದರೆ ಕಾಂಗ್ರೆಸ್ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ. ಕರ್ನಾಟಕದ ಜನತೆ ಇದರ ಬಗ್ಗೆ ಎಚ್ಚರವಾಗಿರಬೇಕು. ಜನತಾ ಜನಾರ್ಧನ ಎಂಬುದು ಬಹಳ ಅವಶ್ಯಕತೆ ಇದೆ. ಬಿಜೆಪಿ ಮತ್ತು ನಾನು ನಿಮ್ಮ ಸೇವಕನಂತೆ ಕೆಲಸ ಮಾಡುತ್ತಿದ್ದೇನೆ. ಆದರೆ ಕಾಂಗ್ರೆಸ್ ಸೇವೆ ದೆಹಲಿಯಲ್ಲಿನ ಕುಟುಂಬದ ಮೇಲೆ ಇದೆ.ಜನರೇ ನನ್ನ ಪರಿವಾರ

ಕಾಂಗ್ರೆಸ್ನ ರಿಮೋಟ್ ಇರುವುದು ದೆಹಲಿಯ ಒಂದು ಕುಟುಂಬದ ಮನೆಯಲ್ಲಿ. ಜೆಡಿಎಸ್ ಒಂದು ಪರಿವಾರದ ಪ್ರೈವೆಟ್ ಲಿಮಿಟೆಡ್ ಕಂಪನಿ. ಆದರೆ ಮೋದಿಗೆ ಈ ಕುಟುಂಬ ರಾಜ-ಕಾರಣ ಗೊತ್ತಿಲ್ಲ. ಜನರೇ ನನ್ನ ಪರಿವಾರ. ಜನರ ಸುಖ-ದುಃಖಗಳೇ ನನಗೆ ನನ್ನ ಕುಟುಂಬದ ಸುಖ-ದುಃಖಗಳಿದ್ದಂತೆ ಎಂದು ಪ್ರಧಾನಿ ಮೋದಿ ಹೇಳಿದರು.ಬಿಜೆಪಿ ಕರ್ನಾಟಕವನ್ನು ಅಭಿವೃದ್ಧಿ ಮಾಡಲು ಪಣ ತೊಟ್ಟಿದೆ. ಇಡೀ ಭಾರತದಲ್ಲಿ ಕರ್ನಾಟಕ ನಂ.1 ರಾಜ್ಯವಾಗಬೇಕು. ಬಿಜೆಪಿ ಮತ ಹಾಕಿದಾಗ ಕರ್ನಾಟಕವನ್ನು ದೇಶದಲ್ಲೇ ನಂಬರ್ 01 ರಾಜ್ಯವನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಇದರ ಭಾಗವಾಗಿ ಸದ್ಯ ರಾಜ್ಯದಲ್ಲಿ ವಿಮಾನ ನಿಲ್ದಾಣ, ಆಧುನಿಕ ರೈಲ್ವೇ ನಿಲ್ದಾಣಗಳು ನಿರ್ಮಾಣವಾಗುತ್ತಿವೆ

ಕಾಂಗ್ರೆಸ್ ನಾಯಕರಿಗೆ ಅವಮಾನ ಮಾಡುವುದು ಜಾಯಮಾನವಾಗಿದೆ. ನಾಯಕರಾದ ವೀರ ಸಾವರ್ಕರ್, ಅಂಬೇಡ್ಕರ್ ಅವರಿಗೆ ಅಪಮಾನ ಎಸಗಿದ ಕಾಂಗ್ರೆಸ್, ಕನ್ನಡಿಗರಾದ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್ ಅವರನ್ನೂ ಸಹ ಕೆಟ್ಟದಾಗಿ ನಡೆಸಿಕೊಳ್ಳುವ ಮೂಲಕ ದ್ರೋಹ ಬಗೆದಿದೆ. ಕಿತ್ತೂರು ರಾಣಿ ಚೆನ್ನಮ್ಮರಂತಹ ವೀರನಾಡಲ್ಲಿ, ಎಲ್ಲಿಯ ತನಕ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿತ್ತೋ, ಅಲ್ಲಿಯವರೆಗೂ ಮಹಿಳೆಯರಿಗೆ ಸೈನ್ಯ ಹಾಗೂ ನೌಕಾದಳಗಳಲ್ಲಿ ಅವಕಾಶವಿರಲಿಲ್ಲ. ನಮ್ಮ ಸರ್ಕಾರದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಅವಕಾಶಗಳ ಬಾಗಿಲು ತೆರೆದಿದ್ದೇವೆ ಎಂದು ಮೋದಿ ಹೇಳಿದರು.

## ನಮ್ಮ ಪ್ರಣಾಳಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ: ಡಿಕೆಶಿ ಸ್ಪಷ್ಟನೆ



ಬೆಂಗಳೂರು: ಬಜರಂಗದಳ ನಿಷೇಧ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿದ್ದು, ಇದು ಭಾರೀ ವಿವಾದಕ್ಕೀಡಾಗಿದೆ. ಬಿಜೆಪಿ ನಾಯಕರು ಹಾಗೂ ಹಿಂದೂಪರ ಸಂಘಟನೆಗಳು ಕಾಂಗ್ರೆಸ್ ವಿರುದ್ಧ ಇದೀಗ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅದರಂತೆ ಭಜರಂಗದಳ ಬ್ಯಾನ್ ವಿಚಾರ ಕುರಿತು 'ನಾವೂ ಆಂಜನೇಯ ಭಕ್ತರು. ಅವರು ಮಾತ್ರನಾ?, ಶಾಂತಿ ತೋಟ ಕದಲಬಾರದು. ಸೌಹಾರ್ದತೆ ಇರಬೇಕು. ಭಜರಂಗದಳ ಬ್ಯಾನ್ ಮಾಡ್ತೀವಿ ಅಂದ್ರೆ ಯಾಕೆ ಅವರು ಗಾಬರಿ ಆಗ್ತಿದ್ದಾರೆ. ಆಂಜನೇಯನಿಗೂ ಭಜರಂಗದಳಕ್ಕೂ ಏನ್ ಸಂಬಂಧ. ಬಿಜೆಪಿ ಅವರು ಬಹಳ ಪ್ರವೋಕ್ ಮಾಡ್ತಿದ್ದಾರೆ. ಜನಕ್ಕೆ ಇದು ಅರ್ಥ ಅಗಿದೆ. ನಮ್ಮ ಪ್ರಣಾಳಿಕೆಯಲ್ಲಿ ಬದಲಾವಣೆ ಇಲ್ಲ ಎಂದು ಡಿಕೆ ಶಿವಕುಮಾರ್ ಸ್ಪಷ್ಟನೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಯೊಂದಿಗೆ ಮಾತನಾಡಿದ ಅವರು 'ನಾವು ಹನುಮಂತ ಭಕ್ತರು, ಆಂಜನೇಯ ಬೇರೆ ಭಜರಂಗದಳ ಬೇರೆ, ಬಿಜೆಪಿ ಅವರು ಭಜರಂಗಿ ಎಂದು ಕ್ಯಾಂಪೇನ್ ಮಾಡೋದು ಬೇಡ. ಹೊಟ್ಟೆಗೆ ಏನ್ ಕೊಟ್ರಿ, ಉದ್ಯೋಗ ಏನ್ ಕೊಟ್ರಿ ಹೇಳಿ ಎಂದರು. ಇನ್ನು ಇದೇ ವೇಳೆ ನಾಳೆ(ಮೇ.4) ಹನುಮ ಚಾಲಿಸ ಪಠಣೆ ವಿಚಾರ 'ಹನುಮ ಚಾಲಿಸ ನಾವು ದಿನಾ ಮಾಡ್ತೀವಿ. ಅವರೊಬ್ಬರೇನಾ ಮಾಡೋದು. ಹಿಂದಿನ ಖಖಖ ಬೇರೆ, ಈಗಿನ ಖಖಖ ಬೇರೆ ಎಂದಿದ್ದಾರೆ.

ಕುಂಬಳ ಕಾಯಿ ಕಳ್ಳ ಅಂದ್ರೆ, ಯಾಕೆ ಹೆಗಲು ಮುಟ್ಟಿ ನೋಡಿಕೊಳ್ತೀರಾ. ಮೊದಲು ನೀವು ದೇಶ ಉಳಿಸಿ, ಆಯನೂರು ಮಂಜುನಾಥ್ ಏನ್ ಹೇಳಿದ್ರು. ಈಶ್ವರಪ್ಪಗೆ ಯಾಕೆ ಟಿಕೆಟ್ ಕೊಟ್ಟಿಲ್ಲ ಹೇಳಿ? ನಮ್ಮ ಗ್ಯಾರಂಟಿ ಕಾರ್ಡ್ ಐತಿಹಾಸಿಕವಾದದ್ದು, ನಮ್ಮ ಗ್ಯಾರಂಟಿ ನಾವು ಕೊಟ್ಟೇ ಕೊಡ್ತೀವಿ. ಬಿಜೆಪಿ ಅವರು ಒಂದೊಂದು ವಿಷಯ ತೆಗೆದುಕೊಂಡು ಹೀಗೆ ಮಾಡ್ತಿದ್ದಾರೆ. ಇದೆಲ್ಲ ವರ್ಕ್ ಆಗೊಲ್ಲ. ನಾನು ಹಿಂದೂ, ನಾನು ಆಂಜನೇಯ ಭಕ್ತ, ರಾಮನ ಭಕ್ತ. ಬಿಜೆಪಿಯವರು ಏನು ಮಾಡಿಕೊಳ್ಳಲಿ. ನಮಗೆ 141ಸೀಟು ಬರೋದು ಪಕ್ಕಾ. ಮೇ.13 ಕ್ಕೆ ಫಲಿತಾಂಶ ಹೊರಗೆ ಬರುತ್ತೆ ಅವಾಗ ಗೊತ್ತಾಗುತ್ತೆ ಎಂದರು.

## ಬಿಜೆಪಿ ಅಭ್ಯರ್ಥಿ ವಿರುದ್ಧ ಕಳ್ಳತನ ಆರೋಪ: ಚಿತ್ತಾಪುರದಲ್ಲಿ ಮೇ 6ರ ಮೋದಿ ಸಭೆ ರದ್ದು



ಕಲಬುರಗಿ: ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಮಣಿಕಂಠ ರಾಠೋಡ ಪರ ಮೇ 6ರಂದು ನಡೆಸಲು ಉದ್ದೇಶಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಸಭೆಯನ್ನು ರದ್ದುಗೊಳಿಸಲಾಗಿದೆ. ಈ ಕುರಿತು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರೌಡಿಶೀಟರ್ ಆಗಿರುವ, ಅಂಗನವಾಡಿ ಮಕ್ಕಳ ಹಾಲಿನ ಪೌಡರ್ ಕಳ್ಳತನ ಮಾಡಿದ ಅಪರಾಧ ಸಾಬೀತಾಗಿದ್ದರಿಂದ ಮಣಿಕಂಠ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು. ಪ್ರಧಾನಿ ಅವರನ್ನು ಕರೆಸಿದರೆ ಪಕ್ಷಕ್ಕೆ ಮುಜುಗರವಾಗಬಹುದು ಎಂಬ ಆತಂಕದಿಂದ ಸಭೆಯನ್ನು ರದ್ದುಗೊಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಟಿಕೆಟ್ ನೀಡುವಾಗ ಏಕೆ ಬಿಜೆಪಿಗೆ ಮುಜುಗರ ಆಗಿಲ್ಲ ಎಂದು ಸಾರ್ವಜನಿಕರ ಪ್ರಶ್ನೆಯಾಗಿದೆ.

## ಚಿನ್ನ ಸಾಗಾಟ: ಆರೋಪಿ ವಶಕ್ಕೆ



ಹೈದರಾಬಾದ್: ಕಳೆದ ಕೆಲವು ದಿನಗಳಿಂದ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಹಲವಾರು ಕಳ್ಳಸಾಗಣೆ ಘಟನೆಗಳನ್ನು ಪತ್ತೆ ಹಚ್ಚಿದ್ದಾರೆ. ನಿನ್ನೆ ಚಾಕಲೇಟ್ ರ್ಯಾಪರ್ ಸುತ್ತಿ ಸಾಗಾಟ ಮಾಡುತ್ತಿದ್ದ 16.5 ಲಕ್ಷ ರೂ. ಮೌಲ್ಯದ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಬ್ಬರು ಪ್ರಯಾಣಿರಿಂದ 16.5 ಲಕ್ಷ ಮೌಲ್ಯದ 269 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ಮಂಗಳವಾರ ವಶಪಡಿಸಿಕೊಂಡಿದ್ದಾರೆ.

ಅಧಿಕಾರಿಗಳ ಪ್ರಕಾರ, ಮಂಗಳವಾರ ಬೆಳಗ್ಗೆ ಎಮಿರೇಟ್ಸ್ ವಿಮಾನದಲ್ಲಿ ದುಬೈನಿಂದ ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಬಂದ ಇಬ್ಬರಿಂದ 269 ಗ್ರಾಂ ತೂಕದ ಚಿನ್ನವನ್ನು ಕಸ್ಟಮ್ಸ್ ಏರ್ ಇಂಟೆಲಿಜೆನ್ಸ್ ತಂಡವು ವಶಪಡಿಸಿಕೊಂಡಿದೆ.

ಅವರ ಬ್ಯಾಗ್‌ನಲ್ಲಿದ್ದ ಬಾಕ್ಸ್‌ನಲ್ಲಿ ಚಾಕೊಲೇಟ್‌ಗಳ ನಡುವೆ ಬಚ್ಚಿಟ್ಟಿದ್ದ ಒಟ್ಟು 13 ಚಿಕ್ಕ ಚಿನ್ನದ ತುಂಡುಗಳು ಪತ್ತೆಯಾಗಿವೆ. ಮುಂದಿನ ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

## ಮಾಜಿ ಸಿಎಂ ಯಡಿಯೂರಪ್ಪ, ಸಚಿವರು ಸೇರಿದಂತೆ 28 ಜನರ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲು



ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಬರೋಬ್ಬರಿ 821.22 ಕೋಟಿ ಮೊತ್ತದ ಹಗರಣ ನಡೆಸಿದ ಆರೋಪ ಹಿನ್ನೆಲೆಯಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಸಚಿವರು, ಐಎ ಎಸ್ ಅಧಿಕಾ-ರಿಗಳು ಸೇರಿದಂತೆ ಒಟ್ಟು 28 ಜನರ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲಿಸಲಾಗಿದೆ.

ಆರ್ ಟಿಐ ಕಾರ್ಯಕರ್ತ ಟಿ.ಜೆ.ಅಬ್ರಾಹಂ ಎಂಬುವವರು ಲೋಕಾಯುಕ್ತದಲ್ಲಿ ದೂರು ನೀಡಿದ್ದು, ಮಾಜಿ ಸಿಎಂ ಯಡಿಯೂರಪ್ಪ ಸೇರಿದಂತೆ 28 ಜನರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಬಿಬಿಎಂಪಿಯಿಂದಲು ಕೋಟ್ಯಂತರ ರೂಪಾಯಿ ಅವ್ಯವಹಾರವಾಗಿದೆ. ಆಂಬುಲೆನ್ಸ್ ಖರೀದಿ ನೆಪದಲ್ಲಿ ಹೆಚ್ಚಿನ ವಾಹನ ಸಂಖ್ಯೆ ತೋರಿಸಿ ಲೂಟಿ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

## ನಿವೃತ್ತ ಸರ್ಕಾರಿ ನೌಕರನ ಮನೆ ಮೇಲೆ ಸಿಬಿಐ ದಾಳಿ: 20 ಕೋಟಿ ರೂ. ಸೀಜ್



ಬೆಂಗಳೂರು: ಕೇಂದ್ರ ಜಲ ಮತ್ತು ವಿದ್ಯುತ್ ಸಲಹಾ ಸಂಸ್ಥೆಯ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಗುಪ್ತಾ ಅವರ ದೆಹಲಿ ನಿವಾಸದ ಮನೆ ಮೇಲೆ ಸಿಬಿಐ ದಾಳಿ ಮಾಡಿದೆ. ಅಕ್ರಮ ಆಸ್ತಿ ಗಳಿಕೆ ಪ್ರಕರಣ ಆರೋಪ ಸಂಬಂಧ ಈ ದಾಳಿ ನಡೆಸಲಾಗಿದೆ. ಒಟ್ಟು 19 ಸ್ಥಳಗಳಲ್ಲಿ ಸಿಬಿಐ ದಾಳಿ ಮಾಡಿದ್ದು, ಅವ್ರ ಕುಟುಂಬಸ್ಥರ ಮೇಲು ಪ್ರಕರಣ ದಾಖಲಾಗಿದೆ. ಸಿಬಿಐ ದಾಳಿ ವೇಳೆ ರಾಜೇಂದ್ರ ಗುಪ್ತಾ ಒಬ್ಬರ ಮನೆಯಲ್ಲೇ ಒಟ್ಟು 20 ಕೋಟಿ ನಗದು ಪತ್ತೆಯಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ದೆಹಲಿ, ಚಂಡೀಗಢ, ಪಂಚಕುಲ, ಗುರುಗ್ರಾಮ್, ಸೋನಿಪತ್ ಮತ್ತು ಗಾಜಿಯಾಬಾದ್ ಸೇರಿದಂತೆ ಭಾರತದಾದ್ಯಂತ 19 ಸ್ಥಳಗಳಲ್ಲಿ ರಾಜೇಂದ್ರ ಗುಪ್ತಾ ಅವರ ವಸತಿ ಮತ್ತು ವಾಣಿಜ್ಯ ಆವರಣದಲ್ಲಿ ಶೋಧ ನಡೆಸಲಾಗಿದೆ.

## ಬೆಳಗಾವಿಯಲ್ಲಿ ಬಿಜೆಪಿ ಪರ ಅಬ್ಬರದ ಪ್ರಚಾರ

## ಕರ್ನಾಟಕ ನಂಬರ್ 1 ರಾಜ್ಯ ಮಾಡುವುದಾಗಿ ಭರವಸೆ



ಬೆಳಗಾವಿ: ವಿಧಾನಸಭಾ ಚುನಾವಣೆಗೆ ಒಂದು ವಾರ ಮಾತ್ರ ಬಾಕಿ ಇದ್ದು, ಬಿಜೆಪಿ ಪರ ಮತ ಬೇಟೆಗೆ ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿ ಬೆಳಗಾವಿಗೆ ಎಂಟ್ರಿಕೊಟ್ಟಿದ್ದಾರೆ. ಕೇಸರಿ ಪಾಳಯದ ಅಭ್ಯರ್ಥಿಗಳ ಪರ ಅಬ್ಬರದ ಪ್ರಚಾರ ನಡೆಸಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೈಲವಾಡ ಕ್ರಾಸ್ ನಲ್ಲಿ ಬಿಜೆಪಿ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಕರ್ನಾಟಕವನ್ನು ದೇಶದಲ್ಲೇ ನಂಬರ್ 1 ರಾಜ್ಯವನ್ನಾಗಿ ಮಾಡುವುದಾಗಿ ಭರವಸೆ ನೀಡಿದರು.

ಕಾಂಗ್ರೆಸ್, ಜೆಡಿಎಸ್ ನವರು ಕೇವಲ ವೋಟ್ ಬ್ಯಾಂಕ್ ರಾಜಕೀಯ ಮಾಡುತ್ತಿದ್ದಾರೆ. ಕರ್ನಾಟಕದ ಜನತೆಗೆ ಕಾಂಗ್ರೆಸ್-ಜೆಡಿಎಸ್ ಪಕ್ಷಗಳು ದ್ರೋಹಬಗೆದಿವೆ. ಜಾತಿ ಜಾತಿ ನಡುವೆ ಜಗಳ ತಂದಿಡುವ ಕೆಲಸ ಮಾಡುತ್ತಿದ್ದಾರೆ. ಎರಡೂ ಪಕ್ಷಗಳ ಬಗ್ಗೆ ಜನರು ಎಚ್ಚರಿಕೆಯಿಂದ ಇರುವಂತೆ ಹೇಳಿದರು.

ಕಳೆದ 3-4 ದಿನಗಳಿಂದ ರಾಜ್ಯದ ಹಲವೆಡೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಡಬಲ್ ಇಂಜಿನ್ ಸರ್ಕಾರದ ಶಂಕನಾದ ಮೊಳಗಿದೆ. ಮಹಿಳೆಯರು, ವೃದ್ಧರು, ಯುವಕರು ಎಲ್ಲರೂ ಉತ್ಸಾಹದಲ್ಲಿದ್ದಾರೆ. ಅವರೆಲ್ಲರ ಮಂತ್ರ ಈ ಬಾರಿ ಒಂದೇ ಆಗಿದೆ. ಅದು ಈಬಾರಿಯ ನಿರ್ಧಾರ ಬಹುಮತದ ಬಿಜೆಪಿಯ ಸರ್ಕಾರ ಎಂದು. ಕರ್ನಾಟಕದ ಜನ ಈ ಬಾರಿ ಸ್ಥಿರ ಬಿಜೆಪಿ ಸರ್ಕಾರ ತರಲು ತೀರ್ಮಾನಿಸಿದ್ದಾರೆ ಎಂದು ಹೇಳಿದರು.

## ಅಕ್ರಮ ಹಣ ಸಾಗಾಟ: 6.39ಕೋಟಿ ರೂ. ಮೌಲ್ಯದ ಚಿನ್ನ, ವಜ್ರಾಭರಣ ವಶಕ್ಕೆ ಪಡೆದ ಪೊಲೀಸರು



ಚಿತ್ರದುರ್ಗ: ಚುನಾವಣಾ ಅಖಾಡದಲ್ಲಿ ಕುರುಡು ಕಾಂಚಾಣ ಭಾರೀ ಸದ್ದು ಮಾಡುತ್ತಿದೆ . ಅಲ್ಲಲ್ಲೇ ಕಂತೆ ಕಂತೆ ನೋಟುಗಳು, ಚಿನ್ನಾಭರಣಗಳು ಅಧಿಕಾರಿಗಳಿಗೆ ಸಿಗುತ್ತಿದೆ.

ಅದರಂತೆಯೇ ಚಿತ್ರದುರ್ಗದಲ್ಲಿ 6.39ಕೋಟಿ ರೂ. ಮೌಲ್ಯದ ಚಿನ್ನ, ವಜ್ರಾಭರಣವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಕಣಕುಪ್ಪೆ ಗ್ರಾಮ ಬಳಿಯ ಚೆಕ್ ಪೋಸ್ಟ್ನಲ್ಲಿ ಸೂಕ್ತ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಚಿನ್ನ, ವಜ್ರಾಭರಣ ಜಪ್ತಿ ಮಾಡಲಾಗಿದೆ.

ಈ ಚಿನ್ನಾಭರಣಗಳನ್ನ ಬಳ್ಳಾರಿಯಿಂದ ಬೆಂಗಳೂರಿನತ್ತ ಸಾಗಿಸಲಾಗುತ್ತಿತ್ತು ಅಂತ ತಿಳಿದುಬಂದಿದೆ.

## ಇದು ನನ್ನ ಕೊನೆಯ ಚುನಾವಣೆ: ಶೆಟ್ಟರ್ ಘೋಷಣೆ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ರಾಜ-ಕೀಯದಲ್ಲಿ ಭಾರೀ ಬದಲಾವಣೆಯಾಗಿದೆ. ಬಿಜೆಪಿಯ ಪ್ರಮುಖ ನಾಯಕರಾಗಿದ್ದ ಜಗದೀಶ್ ಶೆಟ್ಟರ್ ಬಿಜೆಪಿ ವಿರುದ್ಧ ಅಸಮಾಧಾನಗೊಂಡು ಸದ್ಯ ಕಾಂಗ್ರೆಸ್ ಸೇರಿದ್ದು ಹು-ಧಾ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಜ್ಯ ವಿಧಾನಸಭಾ ಚುನಾವಣೆ ಎದುರಿಸಲಿದ್ದಾರೆ. ಇದರ ಜೊತೆಗೆ ಇದು ನನ್ನ ಕೊನೆಯ ಚುನಾವಣೆ ಎಂದು ಘೋಷಿಸಿದ್ದಾರೆ. ಜನರಿಗೆ ನೀಡಲಾದ ಕರ ಪತ್ರದಲ್ಲಿ ಇದು ನನ್ನ ಕೊನೆ ಚುನಾವಣೆ ಎಂದು ಘೋಷಿಸಿದ್ದಾರೆ.

ನಾನು ಏಳನೇ ಬಾರಿ ಚುನಾವಣೆ ಎದು-ರಿಸುತ್ತಿದ್ದೇನೆ. ಈ ಬಾರಿಯೂ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದೆ. ಕೆಟ್ಟು ಹೋಗಿರುವ ವ್ಯವಸ್ಥೆ ಸರಿಪಡಿಸುವ ಉದ್ದೇಶ ಇದೆ ಎಂದು ಸುದೀರ್ಘವಾದ ಕರ ಪತ್ರದ ಮೂಲಕ ಹು-ಧಾ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ್ ಶೆಟ್ಟರ್ ಮತ ಹಾಕುವಂತೆ ಮನವಿ ಮಾಡಿದ್ದಾರೆ. ಬಿಜೆಪಿ ತೊರೆದ ಬಗ್ಗೆಯೂ ಕರಪತ್ರದಲ್ಲಿ ಶೆಟ್ಟರ್ ಪ್ರಸ್ತಾಪಿಸಿದ್ದಾರೆ. ಜಗದೀಶ್ ಶೆಟ್ಟರ್ ಕರಪತ್ರ: ರಾಜ್ಯದಲ್ಲಿ 4 ದಶಕಗಳ ಕಾಲ ಪಕ್ಷವನ್ನು ಕಟ್ಟಿ ಬೆಳೆಸಿದ್ದೇವೆ. ನಾನು ವಿನಾಕಾರಣ ಬಿಜೆಪಿ ತೊರೆದಿಲ್ಲ. ಬೆವರು ಸುರಿಸಿ ಕಟ್ಟಿದ ಮನೆ ಬಿಡುವುದು ಅಷ್ಟು ಸುಲಭ ಇರಲ್ಲಿಲ್ಲ. ಈಗ ಹಸ್ತ ಚಿಹ್ನೆಯಡಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದೇನೆ. ನಾನು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದು ರಾಜ್ಯಾದ್ಯಂತ ಸಂಚಲನ ಉಂಟು ಮಾಡಿತ್ತು. ಬಿಜೆಪಿಯಲ್ಲಿ ನಾನು ಕನಸಲ್ಲಿ ಊಹಿಸದ ಪರಿಸ್ಥಿತಿ ಸೃಷ್ಟಿ ಮಾಡಿದರು. ನನ್ನನ್ನು ರಾಜಕೀಯವಾಗಿ ಮುಗಿಸಲು ಕೆಲವರು ಷಡ್ಯಂತ್ರ ನಡೆಸಿದ್ರು. ನನ್ನಂತಹ ಹಿರಿಯ ನಾಯಕರಿಗೆ ಅಪಮಾನ ಯಾಕೆ ಮಾಡಿದ್ರು? ಇದಕ್ಕೆ ಬಿಜೆಪಿ ನಾಯಕರೇ ಉತ್ತರಿಸಬೇಕಿದೆ ಎಂದು ಜಗದೀಶ್ ಶೆಟ್ಟರ್ ಪ್ರಶ್ನಿಸಿದ್ದಾರೆ.

## ನಮ್ಮ ಕಷ್ಟ ಕೇಳದವರು, ಓಟು ಕೇಳೋಕೆ ಬಂದ್ರಾ: ಬಿಜೆಪಿ ಅಭ್ಯರ್ಥಿ ಸಾಸನೂರು ಮತದಾರರು ತರಾಟೆ



ವಿಜಯಪುರ: ವಿಧಾನಸಭೆ ಚುನಾವಣೆಗೆ ಏಳು ದಿನಗಳು ಬಾಕಿಯಿದ್ದು, ಜಿಲ್ಲೆಯ ದೇವರಹಿಪ್ಪರಗಿ ಬಿಜೆಪಿ ಅಭ್ಯರ್ಥಿ ಸೋಮನಗೌಡ ಸಾಸನೂರು ಎಂಬುವವರು ಪ್ರಚಾರಕ್ಕೆ ತೆರಳಿದ್ದಾರೆ.

ಈ ವೇಳೆ ಕ್ಷೇತ್ರದ ಹಿಟ್ಟನಹಳ್ಳಿ ತಾಂಡಾ ಜನರು ಶಾಸಕರನ್ನ ತರಾಟೆಗೆ ತೆಗೆದುಕೊಂಡ ಘಟನೆ ನಡೆದಿದೆ. ಹೌದು ಪ್ರಚಾರಕ್ಕೆ ಬಂದಿದ್ದ ಸೋಮನಗೌಡ ಅವರ ಕಾರಿಗೆ ಮುತ್ತಿಗೆ ಹಾಕಿ, 5 ವರ್ಷಗಳ ಬಳಿಕ ಮತ್ತೆ ಓಟು ಕೇಳೋಕೆ ಬಂದ್ರಾ, ತಾಂಡಾ ಅಭಿವೃದ್ಧಿ ಮಾಡಿಲ್ಲ, ಸಮಸ್ಯೆಗಳಿಗೆ ಸ್ಪಂದಿಸಿಲ್ಲ ಎಂದು ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ವೇಳೆ ಶಾಸಕರ ಬೆಂಬಲಿಗರು ಹಾಗೂ ತಾಂಡಾ ನಿವಾಸಿಗಳು ಕೈ ಕೈ ಮಿಲಾಯಿಸಿದ್ದಾರೆ.

ಇಷ್ಟೆಲ್ಲಾ ಆಗುತ್ತಿದ್ದರೂ ಶಾಸಕ ಸೋಮನಗೌಡ ಮಾತ್ರ ಕಾರಿನಿಂದ ಹೊರಗಡೆ ಇಳಿದಿಲ್ಲ. ಮತ್ತೆ ಈ ತಾಂಡಾಗೆ ಮತ ಕೇಳಲು ಬರಬೇಡಿ ಎಂದಿದ್ದಾರೆ.

## ಬೆಲೆ ಏರಿಕೆಯೇ ಬಿಜೆಪಿಯ ದೊಡ್ಡ ಸಾಧನೆ: ಸತೀಶ್ ಜಾರಕಿಹೊಳಿ



ಸವದತ್ತಿ: ಕಾಂಗ್ರೆಸ್ ಅವಧಿಯಲ್ಲಿ ರಾಜ್ಯದಲ್ಲಿ ಜನಪರವಾದಂತಹ ಅಭಿವೃದ್ಧಿ ಕೆಲಸಗಳಾಗಿವೆ. ಆದ-'ರೆ, ಬಿಜೆಪಿ ಆಡಳಿತದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯೇ ಅವರ ಸಾಧನೆಯಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಯರಝರ್ವಿ ಗ್ರಾಮದಲ್ಲಿ ಜರುಗಿದ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಅವರ ಪರ ಮತಯಾಚಿಸಿ ಮಾತನಾಡಿದರು.

ಸಿದ್ದರಾಮಯ್ಯ ಸರ್ಕಾರ ಹಿಂದುಳಿದವರ ಪರ ನಿಂತು ಅನೇಕ ಯೋಜನೆಗಳನ್ನು ಜಾರಿ ಮಾಡಿತು. ಬಡವರ ಅಭಿವೃದ್ಧಿಗಾಗಿ ಶ್ರಮಿಸಿತು.

ಆದರೆ, ಬಿಜೆಪಿ ಅವಧಿಯಲ್ಲಿ ಪೆಟ್ರೋಲ್, ಡಿಸೈಲ್, ರಸಗೊಬ್ಬರ, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ?-ರಿದ್ದರಿಂದ ಜನ ಸಾಮಾನ್ಯರ ಬದುಕು ದುಸ್ಥರವಾಗಿದೆ ಎಂದು ಹೇಳಿದರು.

ಮತದಾರರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರೆ ಮತ್ತಷ್ಟುಜನಪರ ಯೋಜನೆಗಳನ್ನು ಜರಿಗೊಳಿಸಲಾಗುತ್ತದೆ. ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೆ ನಿಮ್ಮ ಅಮೂಲ್ಯ ಮತವನ್ನು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಅವರಿಗೆ ನೀಡಿ ಅಭಿವೃದ್ಧಿಗೆ ಬೆಂಬಲಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಸೇರಿದಂತೆ ಹಲವರು ಇದ್ದರು.

## ಕರ್ನಾಟಕದಲ್ಲಿ ಕಾಂಗ್ರೆಸ್ ಬಂದರೆ ಗಲಭೆಗಳಾಗುತ್ತವೆ ಹೇಳಿಕೆ: ಅಮಿತ್ ಶಾ ವಿರುದ್ಧ ಬಿಹಾರದಲ್ಲಿ ಪ್ರಕರಣ ದಾಖಲು



ಪಾಟ್ನಾ: ತಮ್ಮ ಹೇಳಿಕೆಗಳ ಮೂಲಕ ಕರ್ನಾಟಕದಲ್ಲಿ ಕೋಮು ಉದ್ವಿಗ್ನತೆಯನ್ನು ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿ ಬಿಹಾರದ ದರ್ಭಾಂಗಾ ಜಿಲ್ಲೆಯ ಕಾಂಗ್ರೆಸ್ ನಾಯಕಿ ಪ್ರತಿಭಾ ಸಿಂಗ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಏಪ್ರಿಲ್ 25 ರಂದು ಕರ್ನಾಟಕದ ಬೆಳಗಾವಿಯಲ್ಲಿ ನಡೆದ ರ್ಯಾಲಿಯಲ್ಲಿ ಶಾ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಗಲಭೆಗಳು ನಡೆಯುತ್ತವೆ ಎಂದು ಹೇಳಿದ್ದಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಲಾಗಿದೆ.


ಅಮಿತ್ ಶಾ ತಮ್ಮ ಭಾಷಣದ ಮೂಲಕ ಕರ್ನಾಟಕದಲ್ಲಿ ದ್ವೇಷ ಮತ್ತು ಕೋಮು ಉದ್ವಿಗ್ನತೆಯನ್ನು ಹರಡಲು ಪ್ರಯತ್ನಿಸುತ್ತಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಗಲಭೆಗಳು ನಡೆಯುತ್ತವೆ ಎಂದಿದ್ದಾರೆ. ಅದೊಂದು ಪ್ರಚೋದನಕಾರಿ ಭಾಷಣ.

ಆದ್ದರಿಂದ ನಾವು ಅವರ ವಿರುದ್ಧ ಐಪಿಸಿ ಸೆಕ್ಷನ್ 153, 505 (2) ಮತ್ತು 506 ರ ಅಡಿಯಲ್ಲಿ (ಸಂಖ್ಯೆ 490/23) ಪ್ರಕರಣವನ್ನು ದಾಖಲಿಸಿದ್ದೇವೆ' ಎಂದು ಪ್ರತಿಭಾ ಸಿಂಗ್ ಹೇಳಿದರು.

ರಾಜ್ಯದಲ್ಲಿ ಕೋಮು ಸೌಹಾರ್ದತೆಯನ್ನು ಕದಡಲು ಅಮಿತ್ ಶಾ ಅವರು ಉದ್ದೇಶಪೂರ್ವಕವಾಗಿ ಕರ್ನಾಟಕದಲ್ಲಿ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಆರೋಪಿಸಿದ್ದಾರೆ.

ಹಿರಿಯ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಸೂರತ್ ಮತ್ತು ಪಾಟ್ನಾ ಜಿಲ್ಲಾ ನ್ಯಾಯಾಲಯಗಳಲ್ಲಿ ಪ್ರತ್ಯೇಕ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗಳ ಹಿನ್ನೆಲೆಯಲ್ಲಿ ಸಿಂಗ್ ಅವರ ಈ ಕ್ರಮವನ್ನು ಬಿಜೆಪಿಗೆ ಪ್ರತಿಕ್ರಿಯೆಯಾಗಿ ಕಾಣಬಹುದು.



## ಇಬ್ಬರು ಉಗ್ರರ ಹೊಡೆದುರುಳಿಸಿದ ಸೇನಾಪಡೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕುಪ್ವಾರದಲ್ಲಿ ಭಾರತೀಯ ಸೇನಾಪಡೆ ಎನ್ಕೌಂಟರ್ ನಡೆಸಿದ್ದು, ಇಬ್ಬರು ಉಗ್ರರನ್ನು ಹತ್ಯೆ ಮಾಡಿದೆ ಎಂದು ಬುಧವಾರ ತಿಳಿದುಬಂದಿದೆ.

ಕುಪ್ವಾರ ಜಿಲ್ಲೆಯ ಪಿಚ್ನಾಡ್ ಮಚಿಲ್ ಪ್ರದೇಶದ ಬಳಿ ಭದ್ರತಾ ಪಡೆಗಳು ಎನ್ಕೌಂಡರ್ ನಡೆಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸ್ಥಳದಲ್ಲಿ ಇನ್ನೂ ಹಲವು ಉಗ್ರರು ಅಡಗಿ ಕುಳಿತಿರುವ ಶಂಕೆಗಳು ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಸ್ಥಳವನ್ನು ಸುತ್ತುವರೆದಿರುವ ಭದ್ರತಾಪಡೆಗಳು ಹಾಗೂ ಜಮ್ಮು-ಕಾಶ್ಮೀರದ ಪೊಲೀಸರು ಶೋಧ ಕಾರ್ಯಾಚರಣೆಯನ್ನು ಮುಂದುವರೆಸಿದ್ದಾರೆ.

# ಜೈನ ಸಮುದಾಯದಿಂದ ಒಂದೇ ಪಕ್ಷಕ್ಕೆ ಬೆಂಬಲ ನೀಡಿಲ್ಲ



ಅಥಣಿ : ಜೈನ ಸಮಾಜದ ಕೆಲವು ಮುಖಂಡರು ನಮ್ಮ ಗಮನಕ್ಕೆ ತರದೆ ನಮ್ಮ ಸಮುದಾಯ ಜನರನ್ನು ಒಂದೆಡೆ ಸಭೆ ಕರೆದು ಒಂದು ಪಕ್ಷಕ್ಕೆ ಬೆಂಬಲ ಹೇಳಿರುವುದು ಸ್ವಾರ್ಥ ರಾಜಕಾರಣವಾಗಿದೆ. ಅದಕ್ಕಾಗಿ ಸಮಾಜ ಬಾಂಧವರು ತಮ್ಮ ಮತದಾನ ಹಕ್ಕನ್ನು ನಮ್ಮ ಸಮುದಾಯದ ಏಳಿಗೆಗಾಗಿ ಶ್ರಮಿಸಿದವರಿಗೆ ನೀಡಬೇಕು ಎಂದು ಅಥಣಿ ತಾಲೂಕ ಜೈನ ಸಮುದಾಯದ ತಾಲೂಕ ಅಧ್ಯಕ್ಷ ಜಿನಗೌಡ ಪಾಟೀಲ ಹೇಳಿದರು. ಅವರು ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ನಮ್ಮ ಸಮುದಾಯದಲ್ಲಿನ ಕೆಲವು ಮುಖಂಡರು ಜನರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಜೈನ ಸಮಾಜದ ಅನೇಕ ಮುಖಂಡರನ್ನು ಹೊರಗಿಟ್ಟು ಈ ಸಭೆ ಮಾಡಿದ್ದಾರೆ. ಮತ್ತು ಈ ಸಭೆಯಲ್ಲಿ ಒಂದು ಪಕ್ಷಕ್ಕೆ ಬೆಂಬಲ ನೀಡುವಂತೆ ಕೋರಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಸ್ವತಂತ್ರವಾದ ಮತದಾನ ಹಕ್ಕು ಇದೆ. ಮತಕ್ಷೇತ್ರದಲ್ಲಿ ಇಲ್ಲಿಯವರೆಗೆ ನಮ್ಮ ಸಮಾಜದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ಒದಗಿಸಿದವರಿಗೆ ತಮ್ಮ ಮತಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನ್ಯಾಯವಾದಿ ಲೆನಿನ್ ಹಳಿಂಗಳಿ, ಮಹಾವೀರ ಪಡನಾಡ, ಗೋಪು ಸಪ್ತಸಾಗರ, ನಿಂಗಪ್ಪ ನಂದೇಶ್ವರ, ದೀಪಕ ಪಾಟೀಲ, ದೀರಜ ಪಾಟೀಲ, ಬಾಳಾಸಾಹೇಬ ಖವಟಕೊಪ್ಪ, ಮುದುಕಪ್ಪ ಬೊಮ್ಮಣ್ಣವರ, ಅಶೋಕ ದಾನಗೌಡರ ಸೇರಿದಂತೆ ಇನ್ನಿತರರು.

# ಆಮ್ ಆದ್ಮಿ ಪಕ್ಷದ ವಿನಾಯಕ ದೇಸಾಯಿ ಕಾಂಗ್ರೆಸ್ ತೆಕ್ಕೆಗೆ



ಅಥಣಿ ; ಕಳೆದ ಹಲವಾರು ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡಿದ್ದ ವಿನಾಯಕ ದೇಸಾಯಿ ಮರಳಿ ಮನೆಗೆ ಎನ್ನುವಂತೆ ತಮ್ಮ ಅನೇಕ ಬೆಂಬಲಿಗರೊಂದಿಗೆ ಮೂಲ ಕಾಂಗ್ರೆಸ್ ಪಕ್ಷವನ್ನು ಸೇರಿದ್ದು ನನಗೆ ಬೆಂಬಲವಾಗಿ ನಿಂತು ನಮಗೆ ಬಲವನ್ನು ತಂದಿದ್ದಾರೆ ಹಾಗೆಯೇ ಚುನಾವಣೆಯಲ್ಲಿ ನಮ್ಮ ಪರವಾಗಿ ಪ್ರಚಾರದಲ್ಲಿ ಭಾಗಿಯಾಗುವ ಮೂಲಕ ಅತಿ ಹೆಚ್ಚು ಮತಗಳನ್ನು ತಂದು ನನ್ನನ್ನು ಗೆಲ್ಲಿಸುವ ಕೆಲಸವನ್ನು ವಿನಾಯಕ ದೇಸಾಯಿ ಸೇರಿದಂತೆ ಎಲ್ಲ ಸಮಾಜದ ಬಾಂಧವರು, ಯುವಕರು, ಅಭಿಮಾನಿಗಳು ಮಾಡುವ ಭರವಸೆ ಇದೆ ಎಂದರು. ಅಥಣಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಲಕ್ಷ್ಮಣ ಸವದಿ ಹೇಳಿದರು.

ಬುಧುವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ವಿನಾಯಕ ದೇಸಾಯಿಯವರನ್ನು ಕಾಂಗ್ರೆಸ್ ಪಕ್ಷದ ಧ್ವಜ ನೀಡುವ ಮೂಲಕ ಪಕ್ಷಕ್ಕೆ ಗೌರವಯುತವಾಗಿ ಬ ರ ಮ ಾ ಡ ಿ ಕ ೊ ಂ ಡ ರ ು ಮಾತನಾಡಿದರು,

ಈ ವೇಳೆ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡು ವಿನಾಯಕ ದೇಸಾಯಿ ಮಾತನಾಡಿ ಕಳೆದ ಏಳೆಂಟು ತಿಂಗಳಿಂದ ಆಮ್ ಆದ್ಮಿ ಪಕ್ಷಕ್ಕೆ ಸೇರಿದ್ದು ಯಾವಾಗ ಸವದಿ ಅವರು ಸ್ಪರ್ಧೆ ಮಾಡಿದರೋ ಅವರಿಗೆ ಮತ್ತಷ್ಟು ಮತಗಳನ್ನು ತರುವ ವಿಚಾರದಿಂದ ಇಂದು ಕಾಂಗ್ರೆಸ್ ಪಕ್ಷದ ಸೇರ್ಪಡೆ ಆಗಿದ್ದೇನೆ.ಕಳೆದ ಮೂವತ್ತು ವರ್ಷಗಳಿಂದ ಮರಾಠಾ ಸಮಾಜದ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದು ನಮ್ಮದೆ ಆದ ಒಂದು ತಂಡದ ಜೊತೆಗೆ ಲಕ್ಷ್ಮಣ ಸವದಿ ಅವರ ಪರ ಪ್ರಚಾರ ಮಾಡುವ ಮೂಲಕ ಹೆಚ್ಚಿನ ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸವದಿ ಅವರು ಅತಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುವಂತೆ ಕೆಲಸ ಮಾಡಲಿದ್ದೇವೆ ಎಂದರು

ಈ ವೇಳೆ ಶಿವಕುಮಾರ ಸವದಿ, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸೈಯದ್ ಗಡ್ಡೇಕರ, ರಾಜು ಬುಲಬುಲೆ, ಸೈಯದಅಮೀನ್ ಗದ್ಯಾಳ, ಸಲಾಂ ಕಲ್ಲಿ, ರಿಯಾಜ್ ಸನದಿ, ಯುವರಾಜ ದೇಸಾಯಿ, ಗಜಾನನ ಪಾಟಿಲ, ಕೇಶವ ಪಾಟೀಲ(ವಾಜಪೇಯಿ), ಧೈರ್ಯಶೀಲ ದೇಸಾಯಿ, ಶಿವಾಜಿ ನಿಕ್ಕಮ್, ಮುರಗೇಶ್ ಅಪರಾಜ, ಅವಿನಾಶ ಪಾಟೀಲ, ವಿಜಯ ಕವಟೇಕರ, ಮಾರುತಿ ಜಾಧವ, ಸುರೇಶ ನಂದೀವಾಲೆ, ಅಮ್ಜದ್ ಸಾಂಗಲಿಕರ, ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೆಳಗಾವಿ: ಉತ್ತರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಿವಾನಂದ ಮುಗಳಿಹಾಳ್ ವಿವಿಧ ಪ್ರದೇಶಗಳಲ್ಲಿ ಕಾರ್ಯಕರ್ತರೊಂದಿಗೆ ಬಿರುಸಿನ ಪ್ರಚಾರ ನಡೆಸಿದರು. ಜೆಡಿಎಸ್ ಅಭ್ಯರ್ಥಿ ಶಿವಾನಂದ ಮುಗಳಿಹಾಳ್ ಚುನಾವಣಾ ಪ್ರಚಾರದಲ್ಲಿ ಮುನ್ನಡೆ ಸಾಧಿಸಿದ್ದಾರೆ. ಅವರು ಹೋದಲ್ಲೆಲ್ಲಾ ಮತದಾರರು ಆತಿಥ್ಯದೊಂದಿಗೆ ಸ್ವಾಗತಿಸಿದರು. ಉತ್ತರ ವಿಧಾನಸಭಾ ಕ್ಷೇತ್ರದ ಹಲವು ಕ್ಷೇತ್ರಗಳಲ್ಲಿ ಮನೆ–ಮನೆ ತೆರಳಿ ಮತ ಕೇಳಲಾಯಿತು. ಚುನಾಯಿತರಾದ ನಂತರ ಸ್ಥಳೀಯ ಜನರು ಮತ್ತು ವಂಚಿತ ನಾಗರಿಕರಿಗೆ ಎಲ್ಲವನ್ನೂ ಸರಿಪಡಿಸುತ್ತೇನೆ ಎಂದು ಮತದಾರರಿಗೆ ಭರವಸೆ ನೀಡಿದರು.ಕುಮಾರಸ್ವಾಮಿ ಕೈ ಬಲ ಪಡಿಸುವಂತೆ ಮುಗಳಿಹಾಳ್ ಕೇಳಿಕೊಡರು ಇವರೊಂದಿಗೆ ಅಪಾರ ಸಂಖ್ಯೆಯ ಬೆಂಬಲಿಗರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಸವನ ಕುಡುಚಿ ಬಸವಣ್ಣನ ಆಶೀರ್ವಾದ ಪಡೆದ ಹಿರೇಮಠ



ಬೆಳಗಾವಿ: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿ ಪ್ರವೀಣ ಹಿರೇಮಠ ಬೆಳಗಾವಿ ಉತ್ತರ ಕ್ಷೇತ್ರದ ಬಸವನ ಕುಡುಚಿಯಲ್ಲಿ ಕಾಲ್ನಡಿಗೆಯಲ್ಲಿ ಮನೆ ಮನೆ ತೆರೆಳಿ ಕೆಆರಪಿ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಿ ಮತದಾರರಲ್ಲಿ ಮತ ಚಲಾಯಿಸುವಂತೆ ಕೋರಿದ್ದಾರೆ. ಪ್ರಚಾರದ ವೇಳೆ ನಿವಾಸಿಗಳ ಅಹುವಾಲು ಸ್ವೀಕರಿಸಿದ ಪ್ರವೀಣ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ–ಕ್ಕೆ ಬಸವನ ಕುಡುಚಿ ಜನತೆ ನೀಡುತ್ತಿರುವ ಪ್ರೀತಿ ಹಾಗು ಬೆಂಬಲಕೆ ಚೀರುರುಣಿ ಎಂದು ಹೇಳಿದ್ದಾರೆ.

ಗಾಲಿ ಜನಾರ್ಧನ ರೆಡ್ಡಿ ಅವರ ಪಕ್ಷಕ್ಕೆ ಬಸವನ ಕುಡುಚಿ ಜನತೆಯು ಬಹು ಪರಾಗ ಹಾಕಿದ್ದು ಬೆಳಗಾವಿ ಉತ್ತರ ಕ್ಷೇತ್ರದಲ್ಲಿ ಕಲ್ಯಾಣ ರಾಜ್ಯ ಪಕ್ಷದ ಪರ ನಿಲ್ಲುತೇವೆ ಎಂದು ಮತದಾರರು ಹೇಳಿದ್ದಾರೆ ಎಂದು ಹಿರೇಮಠ ಹೇಳಿದ್ದಾರೆ. ತನ್ನ ಧರ್ಮ ಪತ್ನಿ ಜ್ಯೋತಿ ಹಿರೇಮಠ ಹಾಗು ಕಾರ್ಯಕರ್ತರೊಂದಿಗೆ ಬಸವನ ಕುಡುಚಿಗೆ ತೆರೆಳಿದ ಪ್ರವೀಣ ಪ್ರತಿ ಮನೆಗೆ ತೆರೆಳಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಪ್ರಣಾಳಿಕೆ ಹಾಗು ಪಕ್ಷದ ಮುಂದಿನ ಯೋಜನೆಗಳ ಬಗ್ಗೆ ಮತದಾರರಲ್ಲಿ ತಿಳಿಹೇಳಿದ್ದಾರೆ. ಸರ್ವರಿಗೂ ಸಮ ಬಾಳು ಸರ್ವರಿಗೂ ಸಮ ಪಾಲು ಎಂದು ಹೇಳುವ ಮೂಲಕ ಮನೆ ಮನೆಗೆ ತೆರಳಿದ ಪ್ರವೀಣ್ ಪಕ್ಷದ ಸಂಘಟನೆ ಮತ್ತಷ್ಟು ಗಟ್ಟಿಗೊಳಿಸುತಿದ್ದಾರೆ ಎಂದು ತಿಳಿಸಿದ್ದಾರೆ. ಬಸವನ ಕುಡುಚಿಯ ಗಲ್ಲಿ ಗಲ್ಲಿಯಲ್ಲಿ ತೆರೆಳಿ ಪ್ರಚಾರ್ ನಡೆಸಿದ ಪ್ರವೀಣ ಜನ ಬೆಂಬಲ ಮತ್ತಷ್ಟು ಗಟ್ಟಿಗೊಳಿಸಿಕೊಂಡು ಮುನ್ನುಗ್ಗುತಿದ್ದಾರೆ ಎಂದು ಹೇಳಿದ್ದಾರೆ. ಬೆಳಗಾವಿ: ಬೆಳಗಾವಿ ಉತ್ತರ ಮತ ಕ್ಷೇತ್ರದಲ್ಲಿ ವಿಭಿನ್ನ ರೀತಿಯಲ್ಲಿ ಮತ ಯಾಚಿಸುತ್ತಿರುವ ಪ್ರವೀಣ ಹಿರೇಮಠ ಮನೆ ಮನೆಗೆ ತೆರೆಳಿ ಗುರು ಹಿರಿಯರನ್ನು ಭೇಟಿಯಾಗಿ ಮತಯಾಚಿಸುತಿದ್ದಾರೆ.

ಗಾಲಿ ಜನಾರ್ಧನ ರೆಡ್ಡಿಯವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಪ್ರವೀಣ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಪ್ರಣಾಳಿಕೆ ಮತ್ತು ಅದರ ಮುಂದಿನ ಯೋಜನೆಗಳ ಬಗ್ಗೆ ತಿಳಿಹೇಳಿ ಮತಯಾಚಿಸಿದ್ದಾರೆ. ಇನ್ನು ಐಟಿ ಬಿಟಿ ಫುಲ್ ಹೈಲೈಟ್ ಮಾಡಿದ ಪ್ರವೀಣ ಮುಂಬರುವ ದಿನಗಳಲ್ಲಿ ಬೆಳಗಾವಿಯಲ್ಲಿ ಐಟಿ ಬಿಟಿ ಹಾಗು ಅನೇಕ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದಾರೆ. ಇನ್ನು ಓಖಖ ಕ್ಯಾಂಡಿಡೇಟ ಎಂದೇ ಪ್ರಖ್ಯಾತಿ ಪಡೆದಿರುವ ಪ್ರವೀಣ ತಮ್ಮ ವಿಚಾರ ಧಾರೆ ಮತ್ತು ನಡೆ ನುಡಿಗಳ ಮೂಲಕ ಜನ ಮನ ಗೆಲ್ಲುತ್ತಿರುವ ಪ್ರವೀಣ ಮತಾಧಾನ ನಿಮ್ಮದು ಅಭಿವೃದ್ಧಿ ನಮ್ಮದು ಎಂದು ಹೇಳಿ ತಮ್ಮ ಪಕ್ಷದ ಚಿನ್ಹೆ ಫುಟ್ಬಾಲ ಹಾಗು ಕ್ರಮ ಸಂಖ್ಯೆ 6ಕ್ಕೆ ಮತ ಚಲಾಯಿಸುವಂತೆ ಮತದಾರರಲ್ಲಿ ಕೋರಿದ್ದಾರೆ.

# ಬಿಜೆಪಿ ವಿರುದ್ಧ ಸಿಡಿದೆದ್ದ ಖಾನಾಪುರ ಲಿಂಗಾಯತ ಸಮಾಜ

ಖಾನಾಪುರ: ತಾಲೂಕಿನ ಹಿರೇ ಮುನವಳ್ಳಿ ಗ್ರಾಮದಲ್ಲಿ ಮೋಹನ ಸಂಬರಗಿ ಅವರ ಮನೆಯಲ್ಲಿ ವಿವಾಹ ವಾರ್ಷಿಕೋತ್ಸವ ಸಮಾರಂಭದ ನೆಪ ಮಾಡಿ ಬಿಜೆಪಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಿದ ಬಿಜೆಪಿ ಪಕ್ಷದ ಮುಖಂಡರು ಮೇಲೆ ಎಫ್ ಐ ಆರ್ ನಂದಗಡ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ ಎಂದು ಪಂಚಮಸಾಲಿ ಲಿಂಗಾಯತ ಸಮಾಜದ ಮುಖಂಡ ಸಂಗಮೇಶ್ ವಾಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ತಾಲೂಕಿನ ಹಿರೇ ಮುನವಳ್ಳಿ ಗ್ರಾಮದಲ್ಲಿ ಸೋಮವಾರದಂದು ರಾತ್ರಿ 9 ಗಂಟೆಗೆ ಮೋಹನ್ ಸಂಬರಗಿ ಅವರ 44ನೇ ವಿವಾಹ ವಾರ್ಷಿಕೋತ್ಸವದ ನೆಪ ಮಾಡಿ ರಾಜ್ಯಸಭಾ ಸದಸ್ಯರಾದ ಈರಣ್ಣ ಕಡಾಡಿ, ಸಂಸದೆ ಮಂಗಳ ಅಂಗಡಿ, ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ್ ಕವಟಗಿಮಠ ಹಾಗೂ ತಾಲೂಕಿನ ಕೆಲವು ಬಿಜೆಪಿ ಪಕ್ಷದ ಲಿಂಗಾಯತ ಸಮಾಜದ ಮುಖಂಡರು ಕಾರ್ಯಕ್ರಮದ ನೆಪ ಮಾಡಿ ಈಗ ಚುನಾವಣಾ ಆಯೋಗದ ಕೆಂಗಣ್ಣಿಗೆ ಗುರಿಯಾಗಿ ಕಾನೂನನ್ನು ಕೈಗೆತ್ತಿಕೊಂಡು ಈಗ ತಮ್ಮ ಮೈ ಮೇಲೆ ತಾವೇ ಬರೆ ಎಳೆದುಕೊಂಡಂತಾಗಿದೆ ಎಂದು ಮಾತನಾಡಿದರು.

ಇದು ವಿವಾಹ ವಾರ್ಷಿಕೋತ್ಸವದ ಸಮಾರಂಭ ಅಲ್ಲ, ಇದರ ನೆಪದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ ಎಂದು ಖಚಿತ ಮಾಹಿತಿಯ ಮೇರೆಗೆ ಚುನಾವಣಾ ನೂಡಲ್ ಅಧಿಕಾರಿ ರಾಜೇಂದ್ರ ಹೊನಕಂಡಿ ಅವರ ನೇತೃತ್ವದ ತಂಡವು ದಾಳಿ ಮಾಡಿ, ಪಕ್ಷದ ಅಭ್ಯರ್ಥಿ ಪರ ಪ್ರಚಾರಕ್ಕಾಗಿ ಆಮಿಷ ವಡ್ಡಲು ಮಾಡಿರುವಂತಹ ಊಟದ ವ್ಯವಸ್ಥೆಯನ್ನು ಸಹ ಗಮನಿಸಿ, ಎ1 ಆರೋಪಿಯಾಗಿ ಮಹಾಂತೇಶ ಸಂಬರಗಿ, ಎ2 ಆರೋಪಿಯಾಗಿ ಈರಣ್ಣ ಕಡಾಡಿ, ಎ3 ಆರೋಪಿಯಾಗಿ ಮಂಗಳ ಅಂಗಡಿ ಹಾಗೂ ಎ4 ಆರೋಪಿಯಾಗಿ ಮಹಾಂತೇಶ್ ಕವಟಗಿ ಮಠ ಅವರ ಮೇಲೆ ಕಾನೂನಾತ್ಮಕವಾಗಿ ಎಫ್ಐಆರ್ ದಾಖಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಲಿಂಗಾಯತ ಸಮಾಜದ ಮುಖಂಡ ಮಹಾಂತೇಶ್ ಕಲ್ಯಾಣಿ ಅವರು ಖಾನಾಪೂರ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷವು ಲಿಂಗಾಯತ ಸಮಾಜಕ್ಕೆ ಏನು ಮಾಡಿದೆ ಎಂದು ಪ್ರಶ್ನೆ ಮಾಡುತ್ತಿದೆ. ಅವರಿಗೆ ಉತ್ತರ ಕೊಡುತ್ತಿದ್ದೇನೆ ಸರಿಯಾಗಿ ಕೇಳಿಸಿಕೊಳ್ಳಿ ಲಿಂಗಾಯತ ಸಮಾಜ ಖಾನಾಪುರ ತಾಲೂಕಿನ ಕಾಂಗ್ರೆಸ್ ಪಕ್ಷದ ವಿಧಾನಸಭಾ ಚುನಾವಣೆಯ ಟಿಕೆಟ್ ಅನ್ನು 1990ರಲ್ಲಿ ನೀಡಿತ್ತು. ಇದರ ಜೊತೆಯಾಗಿ ಕಾಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷರನ್ನು ಸಹ ಲಿಂಗಾಯತ ಸಮಾಜದ ಮುಖಂಡರನ್ನು ಮಾಡಿತ್ತು. ತರ ಜೊತೆಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಕಮಿಟಿಯಲ್ಲಿ ಲಿಂಗಾಯತ ಸಮಾಜದ ಮುಖಂಡರಿಗೆ ಕಾಂಗ್ರೆಸ್ ಪಕ್ಷವು ಗೌರವದ ಸ್ಥಾನಮಾನ ನೀಡಿದೆ. ಎಲ್ಲವೂ ನಮ್ಮ ಕಾಂಗ್ರೆಸ್ ಪಕ್ಷವು ಲಿಂಗಾಯತ ಸಮಾಜಕ್ಕೆ ತಾಲೂಕಿನಲ್ಲಿ ಮಾನ್ಯತೆಯನ್ನು ನೀಡಿದೆ. ನಿಮ್ಮ ಬಿಜೆಪಿ ಪಕ್ಷವು ಖಾನಾಪುರ ತಾಲೂಕಿನಲ್ಲಿ ಲಿಂಗಾಯತ ಸಮಾಜಕ್ಕೆ ಕಡೆಗಣನೆ ಮಾಡಿದೆ. ಆದ್ದರಿಂದ ಇಲ್ಲಿಯವರೆಗೆ ಯಾವುದೇ ತರಹದ ಗೌರವ ಸ್ಥಾನಮಾನದ ಜೊತೆಗೆ ನಡೆಸಿಕೊಳ್ಳುವ ರೀತಿಯು ವಿಭಿನ್ನವಾಗಿದೆ ಎಂದರು.ತದನಂತರದಲ್ಲಿ ಸಂತೋಷ ಹಂಜಿ ಅವರು ಮಾತನಾಡಿ ಜಾತಿಯನ್ನು ರಾಜಕೀಯವಾಗಿ ಬಳಸಿಕೊಳ್ಳಬಾರದು ನಮ್ಮ ಅಜ್ಜರಾದ ಬಸಪ್ಪಣ್ಣಾ ಅರಗಾಂವಿ ಅವರು ಕಾಂಗ್ರೆಸ್ ಪಕ್ಷದಿಂದ ಮೊದಲನೇ ಶಾಸಕಾಗಿದರು, ಕಾಂಗ್ರೆಸ್ ಪಕ್ಷವು ಅವರಿಗೆ ಮಾನ ಸಮ್ಮಾನ ನೀಡಿದೆ ಓಟ್ ಬ್ಯಾಂಕ್ ಸಲುವಾಗಿ ಸಮಾಜವನ್ನು ಉಪಯೋಗ ಮಾಡಬಾರದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಲಿಂಗಾಯತ್ ಸಮಾಜದ ಮುಖಂಡರಾದ ಚಂಬಣ್ಣ ಹೊಸಮನಿ, ಸಂಗಮೇಶ್ ವಾಲಿ, ಮಹಾಂತೇಶ್ ಕಲ್ಯಾಣ, ಸಂತೋಷ್ ಹಂಜಿ, ಮಹಾಂತೇಶ ರಾಹುತ್, ಮಹಾಂತೇಶ್ ಸಂಬರಗಿ, ರಮೇಶ್ ಪಾಟೀಲ್, ಅಭಿಷೇಕ್ ಹೊಸಮನಿ, ದುಂಡಯ್ಯ ಹಿರೇಮಠ, ಜಗದೀಶ್ ಮೂಲಿಮನಿ, ಡಾ–ಕ್ಟರ್ ಜವಳಿ, ಕಿರಣ ಮೂಲಿಮನಿ, ಹಾಗೂ ಲಿಂಗಾಯತ್ ಸಮಾಜದ ನೂರಾರು ಮುಖಂಡರು ಭಾಗವಹಿಸಿದ್ದರು.

# ಬೆಲೆ ಏರಿಕೆಯೇ ಬಿಜೆಪಿಯ ದೊಡ್ಡ ಸಾಧನೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ



ಸವದತ್ತಿ: ಕಾಂಗ್ರೆಸ್ ಅವಧಿಯಲ್ಲಿ ರಾಜ್ಯದಲ್ಲಿ ಜನಪರವಾದಂತಹ ಅಭಿವೃದ್ಧಿ ಕೆಲಸಗಳಾಗಿವೆ. ಆದರೆ, ಬಿಜೆಪಿ ಆಡಳಿತದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯೇ ಅವರ ಸಾಧನೆಯಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಯರಝರ್ವಿ ಗ್ರಾಮದಲ್ಲಿ ಜರುಗಿದ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಅವರ ಪರ ಮತಯಾಚಿಸಿ ಮಾತನಾಡಿದರು. ಸಿದ್ದರಾಮಯ್ಯ ಸರ್ಕಾರ ಹಿಂದುಳಿದವರ ಪರ ನಿಂತು ಅನೇಕ ಯೋಜನೆಗಳನ್ನು ಜಾರಿ ಮಾಡಿತು. ಬಡವರ ಅಭಿವೃದ್ಧಿಗಾಗಿ ಶ್ರಮಿಸಿತು. ಆದರೆ, ಬಿಜೆಪಿ ಅವಧಿಯಲ್ಲಿ ಪೆಟ್ರೊ?ಲ್, ಡಿಸೈಲ್, ರಸಗೊಬ್ಬರ, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ?ರಿದ್ದರಿಂದ ಜನ ಸಾಮಾನ್ಯರ ಬದುಕು ದುಸ್ತರವಾಗಿದೆ ಎಂದು ಹೇಳಿದರು.

ಮತದಾರರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರೆ ಮತ್ತಷ್ಟುಜನಪರ ಯೋಜನೆಗಳನ್ನು ಜರಿಗೊಳಿಸಲಾಗುತ್ತದೆ. ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೆ ನಿಮ್ಮ ಅಮೂಲ್ಯ ಮತವನ್ನು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಅವರಿಗೆ ನೀಡಿ ಅಭಿವೃದ್ಧಿಗೆ ಬೆಂಬಲಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿಶ್ವಾಸ ವೈದ್ಯ ಸೇರಿದಂತೆ ಹಲವರು ಇದ್ದರು.

# ಸಚಿವೆ ಶಶಿಕಲಾ ಜೊಲ್ಲೆ ಚುನಾವಣಾ ಪ್ರಚಾರ



ನಿಪ್ಪಾಣಿ: “ರಾಜ್ಯದ ಸಚಿವೆ, ಕ್ಷೇತ್ರದ ಶಾಸಕಿ, ಯಾಗಿ ಮೂಲ ಸೌಕರ್ಯಗಳನ್ನು ಒದಗಿಸುವುದೊಂದಿಗೆ ಜನರ ತೊಂದರೆ, ಸಂಕಷ್ಟಗಳನ್ನು ನಿವಾರಿಸಲು ಆದ್ಯತೆ ನೀಡಿದ್ದು ಯುವವರ್ಗ ಹಾಗೂ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದ್ದೇನೆ. ಶೇ.20ರಷ್ಟು ರಾಜಕಾರಣ ಹಾಗೂ ಶೇ.80ರಷ್ಟು ಸಮಾಜಕಾರಣ ಮಾಡಿದ್ದರ ಫಲವಾಗಿ ಜನರು ನನ್ನಗೆ ಯಶಸ್ಸಿನ ಉಡ–ುಗೊರೆ ನೀಡಲಿದ್ದಾರೆ” ಎಂದು ಸಚಿವೆ ಶಶಿಕಲಾ ಜೊಲ್ಲೆ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಮಾಂಗೂರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸ್ಥಳೀಯ ಮತಕ್ಷೇತ್ರದ ತಮ್ಮ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ‘ಸ್ಥಳೀಯ ಹಾಲಶುಗರ್ ಕಾರ್ಖಾನೆ ಹಾಗೂ ಜೊಲ್ಲೆ ಗ್ರುಪ್ ಅಡಿಯಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಯುವವರ್ಗಕ್ಕೆ ಉದ್ಯೋಗವಕಾಶ ನೀಡಿದ್ದು ಬರುವ ದಿನಗಳಲ್ಲಿ ಇನ್ನೂ ಸಾವಿರಾರು ಯುವವರ್ಗಕ್ಕೆ ಉದ್ಯೋಗವಕಾಶ ನೀಡುವ ಉದ್ದೇಶವಿದೆ. ಕ್ಷೇತ್ರದ ಸುಮಾರು 70 ಮಹಿಳೆಯರು ಉದ್ಯೋಗಿನಿ ಯೋಜನೆಯಡಿ 10 ಲಕ್ಷ ರೂ. ಸಾಲ ಪಡೆದು ಉದ್ಯೋಗ ಆರಂಭಿಸಿದ್ದು ನನಗೆ ಹೆಮ್ಮೆ ತಂದಿದೆ. ಇದೆ ರೀತಿ ಕ್ಷೇತ್ರದ ಎಲ್ಲ ಮಹಿಳೆ, ಯುವವರ್ಗಕ್ಕೆ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು. ಇಂತಹ ಅನೇಕ ಯೋಜನೆಗಳು ನಾವು ರೂಪಿಸಿದ್ದು ಚುನಾವಣೆಯಲ್ಲಿ ಬಹುಮತಗಳಿಂದ ಗೆಲ್ಲಿಸಿ’ ಎಂದರು.

ರಾಜ್ಯಸಭಾ ಸದಸ್ಯ ಧನಂ–ಜಯ ಮಾಡಿಕ ಮಾತನಾಡಿ ‘ಜೊಲ್ಲೆ ದಂಪತಿ ಮತಕ್ಷೇತ್ರದ ಚಿತ್ರಣವನ್ನೇ ಬದಲಾಯಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವ–ರಿಗೆ ಬಲ ತುಂಬಲು ಶಶಿಕಲಾ ಜೊಲ್ಲೆಯವರಿಗೆ ಎಲ್ಲರೂ ಮತದಾನ ಮಾಡಿ’ ಎಂದರು. ಉದ್ಯಮಿ ರುಷಭ್ ಜೈನ, ವಿಶಾಲ ಸುತಾರ ಮಾತನಾಡಿದರು.

ಸ್ಥಳೀಯ ನಗರಸಭೆ ಅಧ್ಯಕ್ಷ ಜಯವಂತ ಭಾಟಲೆ, ಸಂತೋಷ ಸಾಂಗಾವಕರ, ಪವನ ಪಾಟೀಲ, ವೀರೇಂದ್ರ ಮಾನೆ, ಸುನೀತಾ ಪಾಟೀಲ, ಸುಹಾಸಿನಿ ಚೌಗುಲೆ, ಮತ್ತಿತರರು ಉಪಸ್ಥಿತರಿದ್ದರು.

# ರಾಜು ಸೇಠ್‌ರನ್ನು ಭಾರಿ ಮತಗಳಿಂದ ಗೆಲ್ಲಿಸುವಂತೆ ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚವಾಣ್ ಮನವಿ



ಬೆಳಗಾವಿ: ನಗರಕ್ಕೆ ಕಾಂಗ್ರೆಸ್ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದು, ಮುಂದಿನ ಎಲ್ಲಾ ಅಭಿವೃದ್ಧಿಗೆ ಸಹಕರಿಯಾಗಲಿದೆ ಎಂದು. ಅದಕ್ಕಾಗಿ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚವಾಣ್ ಅವರು ರಾಜು ಸೇಠ್ ಅವರನ್ನು ಭಾರಿ ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಬೆಳಗಾವಿ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಆಸಿಫ್ ಅಲಿಯಾಸ್ ರಾಜು ಸೇಠ್ ಅವರ ಪ್ರಚಾರಕ್ಕಾಗಿ ಅಸದ್ ಖಾನ್ ಸೊಸೈಟಿ ಪ್ರದೇಶದಲ್ಲಿ ಕಾಂಗ್ರೆಸ್ ಪ್ರಚಾರ ಸಭೆ ನಡೆಯಿತು. ಈ ವೇಳೆ ಮಾತನಾಡಿದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಪೃಥ್ವಿ–ರಾಜ್ ಚವ್ಹಾಣ, ಬೆಳಗಾವಿ ನಗರದ ಸರ್ವಾಂಗೀಣ ಅಭಿವೃದ್ಧಿಗೆ ರಾಜು ಸೇಠ್ ಅವರನ್ನು ಭಾರಿ ಮತಗಳಿಂದ ಆಯ್ಕೆ ಮಾಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೆಳಗಾವಿ ಉತ್ತರ ಮಾಜಿ ಶಾಸಕ ಫಿರೋಜ್ ಸೇಠ್, ನನ್ನ ಸಹೋದರ ಹಾಗೂ ಬೆಳಗಾವಿ ಜನತೆಗೆ ಮಾರ್ಗದರ್ಶನ ನೀಡಲು ನಾನು ಸದಾ ಸಿದ್ಧನಿದ್ದೇನೆ. ನನ್ನ ಜೀವನದುದ್ದಕ್ಕೂ ಬೆಳಗಾವಿ ಜನತೆಗೆ ಸೇವೆ ಸಲ್ಲಿಸಿ ನೀವು ನನಗೆ ನೀಡಿದ ಪ್ರೀತಿಯನ್ನು ಹಿಂದಿರುಗಿಸಲು ಬಯಸುತ್ತೇನೆ ಎಂದರು.ಈ ಸಂದರ್ಭದಲ್ಲಿ ಅಭ್ಯರ್ಥಿ ಆಸೀಫ್ ಅಲಿಯಾಸ್ ರಾಜು ಸೇಠ್ ಮಾತನಾಡಿ, ಬೆಳಗಾವಿ ಜನತೆಯಿಂದ ದೊ–ರೆತ ಬೆಂಬಲ ಅಪಾರವಾಗಿದ್ದು, ನಿಮ್ಮೆಲ್ಲರ ಪ್ರೀತಿ ಸದಾ ನನ್ನನ್ನು ಬಲಿಷ್ಠನನ್ನಾಗಿ ಮಾಡಿದೆ. ಬೆಳಗಾವಿ ನಗರಕ್ಕೆ ಸೇವೆ ಸಲ್ಲಿಸುವ ಪ್ರೇರಣೆ ನನ್ನ ಮೊದಲ ಆದ್ಯತೆಯಾಗಿದೆ. ಆದುದರಿಂದ ದಯವಿಟ್ಟು ನಿಮ್ಮ ಸೇವೆ ಮಾಡಲು ನನ್ನನ್ನು ಆರಿಸಿ ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಜಬ್ಬಾರ್ ಖಾನ್, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ವಿನಯ್ ನಾವಲಗಟ್ಟಿ, ಸ್ಥಳೀಯ ಕಾರ್ಪೊರೇಟರ್ಗಳು ಮುಂತಾದವರು ವೇದಿಕೆಯಲ್ಲಿದ್ದರು. ಸಭೆಯಲ್ಲಿ ರಾಜು ಸೇಠ್ ಅವರನ್ನು ಭಾರಿ ಮತಗಳಿಂದ ಆಯ್ಕೆ ಮಾಡಲು ತೀರ್ಮಾನಿಸಲಾಯಿತು.

# ಊಟದ ಆಮಿಷ: ಇಬ್ಬರು ಸಂಸದರು ಸೇರಿ ನಾಲ್ವರ ಮೇಲೆ ಎಫ್ಐಆರ್



ಖಾನಾಪುರ (ಬೆಳಗಾವಿ ಜಿಲ್ಲೆ): ಅನುಮತಿ ಪಡೆ–ಯದೇ ಚುನಾವಣಾ ಪ್ರಚಾರ ಸಭೆ ನಡೆಸಿ, ಊಟದ ವ್ಯವಸ್ಥೆ ಮಾಡಿದ ಆರೋಪದ ಮೇಲೆ ಇಬ್ಬರು ಸಂಸದರು, ಬಿಜೆಪಿಯ ಇಬ್ಬರು ಮುಖಂಡರ ಮೇಲೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದೆ.

ಸಂಸದೆ ಮಂಗಲಾ ಅಂಗಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮುಖಂಡ ಮಹಾಂತೇಶ ಕವಟಗಿಮಠ ಮತ್ತು ಮಲಪ್ರಭಾ ಶುಗರ್ಸ್ ಮಾಜಿ ಅಧ್ಯಕ್ಷ ಮೋಹನ ಸಂಬರಗಿ ವಿರುದ್ಧ ಚುನಾವಣಾಧಿಕಾರಿ ನಂದಗಡ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ್ದಾರೆ. ಇವರೆಲ್ಲರೂ ಮಂಗಳವಾರ ರಾತ್ರಿ ಖಾನಾಪುರ ತಾಲ್ಲೂಕಿನ ಹಿರೇಮುನವಳ್ಳಿ ಗ್ರಾಮದಲ್ಲಿ ಲಿಂಗಾಯತ ಸಮಾಜದ 500ಕ್ಕೂ ಹೆಚ್ಚು ಮುಖಂಡರನ್ನು ಸೇರಿಸಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಕೈಗೊಂಡಿದ್ದರು. ಇದ–ಕ್ಕೆ ಚುನಾವಣಾಧಿಕಾರಿಗಳಿಂದ ಅನುಮತಿ ಪಡೆದಿರಲಿಲ್ಲ ಮತ್ತು ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಕುಡಿಯುವ ನೀರಿನ ಯೋಜನೆ ಕೆಲಸ ಅರ್ಧದಲ್ಲೇ ಸ್ಥಗಿತ

ಬೆಳಗಾವಿ: ಅದು ನೀರಿನ ನಲ್ಲಿಗಳನ್ನು ಹಾಕಿಸಲು ತಗೆದಿದ್ದ ಕಾಲುವೆ ಆದ್ರೆ ಕೆಲಸ ಮಾಡಿದ್ದು ಮಾತ್ರ ಅಪೂರ್ಣ.ಹೊರಗಡೆ ಕಾಲಿಟ್ಟರೆ ಸಾಕು ಬರಿ ಕಲ್ಲು ಮಣ್ಣಿನ ರಾಶಿ ಈ ಘಟನೆ ಕಂಡುಬಂದಿದ್ದು ನಗರದ ಕೊನ್ ವಾಳ್ ಗಲ್ಲಿಯಲ್ಲಿ ಕಳೆದ ಮೂರು ತಿಂಗಳಿಂದ ಇದೆ ರೀತಿಯಾದ ಸಮಸ್ಯೆ ಎದುರಾಗಿದೆ.ಇಕ್ಕಟ್ಟಾದ ರಸ್ತೆ ಇದಾಗಿದ್ದು ವಾಹನ ಸವಾರರು ಕೂಡ ನಿತ್ಯ ಪರದಾಡುವ ಪರಸ್ಥಿತಿ ತಂದೊದಗಿದೆ. ಇನ್ನು ಅರ್ಧಕ್ಕೆ ನಿಲ್ಲಿಸಿ ಕೆಲಸದಿಂದ ಮಣ್ಣು ಹಾಗೂ ಕಲ್ಲಿನ ರಾಶಿಯೇ ಬಿದ್ದಿದ್ದು ಚರಂಡಿಗಳು ಸಹ ಸಂಪೂರ್ಣ ಬಂದಾಗಿವೆ. ಸ್ಥಳೀಯರಾದ ಉಷಾ ಸರಳೆ ಮಾತನಾಡಿ ಹಿಂದೆ ಚರಂಡಿಗೆ ಮತ್ತು ಅದರ ಪಕ್ಕ ನೀರಿನ ಹಾಕಲು ಕಾಲುವೆ ತೆಗೆದಿದ್ದಾರೆ ಇದರಿಂದ ಮಹಿಳೆಯರು,ಮಕ್ಕಳು ಸೇರಿದಂತೆ ಹಿರಿಯರು ನಾಗರಿಕರಿಗೆ ನಡೆದಾಡಲು ಸಹ ಆಗದಂತ ವ್ಯವಸ್ಥೆ ಎದುರಾಗಿದೆ ಎಂದರು.ಇದರಿಂದ ಬೇಸತ್ತ ಜನ ಮಹಾನಗರ ಪಾಲಿಕೆಯ ವಿರುದ್ಧ ಬೇಸತ್ತಿದ್ದಾರೆ. ಇನ್ನು ಸಮಸ್ಯೆ ಹೇಳಿಕೊಳ್ಳ ಬೇಕು ಎಂದರೆ.ಯಾವ ಪಕ್ಷದ ಅಭ್ಯರ್ಥಿಯು ಸಹ ಬರುತ್ತಿಲ್ಲ ಎಂದು ಹೇಳಿದ ಸ್ಥಳೀಯರು ಮತ್ತು ಇದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬಿರುತ್ತಿದ್ದು ಈ ರೀತಿಯ ಕಾರ್ಯದಿಂದ ಬಹಳ ಸಮಸ್ಯೆಯಾಗಿದೆ ಆದಷ್ಟು ಬೇಗ ಸಮಸ್ಯೆ ಪರಿಹರಿಸುವಂತೆ ಸ್ಥಳೀಯರು ಮನವಿ ಮಾಡಿಕೊಂಡರು.

# ಬೆಳಗಾವಿ ಉತ್ತರ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ ರವಿ ಪಾಟೀಲ್ ಅಬ್ಬರದ ಪ್ರಚಾರ



ಜೋಶ್ ನೊಂದಿಗೆ ಪ್ರಾರಂಭವಾದ ಪ್ರಚಾರಇಂದು ಬೆಳಿಗ್ಗೆ 8 ಗಂಟೆಯಿಂದ ಪ್ರಚಾರ ಕಾರ್ಯ ಆರಂಭಿಸಿದರು. ಬಿಜೆಪಿ,ನಗರದ ಪ್ರಮುಖ ಸ್ಥಳಗಳಲ್ಲಿ ಪ್ರಚಾರ ನಡೆಯಿತು. ತಿಲಕ್ ಚೌಕ್ ದಿಂದ ರಾಮಲಿಂಗ ಕಿಂದೆ ಗಲ್ಲಿ,ಆನ್ ಸುಕರ್ ಗಲ್ಲಿ,ರಾಮ್ ದೇವ್ ಗಲ್ಲಿ,ಕಿರ್ಲೋಸ್ಕರ್ ರೋಡ್,ಕೆಲ್ ಕರ್ ಭಾಗ್,ಕೊನ್ವಾಲ್ ಗಲ್ಲಿಗಳಲ್ಲಿ ಪ್ರಚಾರ ಕಾರ್ಯ ಭರದಿಂದ ಸಾಗಿತು.

ಪ್ರಚಾರದಲ್ಲಿ ಭಾಗವಹಿಸಿದ್ದ 70 ರ ಇಳಿವಯಸ್ಸಿನ ಪಾರ್ವತಿ ಮೂಲಿಮನಿ ಅತಿ ಉತ್ಸಾಹಕತೆಯಿಂದ ಪ್ರಚಾರ ಮಾಡಿದರು “ಕಮಲ ಫುಲ ಪವರ್ ಫುಲ್” ಜೋಶ್ ನೊಂದಿಗೆ ಹೇಳುತ್ತ ನಾವು ಹುಟ್ಟಿನಿಂದ ಬಿಜೆಪಿ ಪರ ಮತದಾನದ ಹಕ್ಕು ಬಂದಾಗಿನಿಂದ ಬಿಜೆಪಿ ಯನ್ನು ಬಿಟ್ಟು ಬೇರೆ ಪಕ್ಷಕ್ಕೆ ಮತ ಹಾಕಿಲ್ಲ ಎಂದರು

ಇನ್ನು ಡಾ ರವಿ ಪಾಟೀಲ್ ಅವರ ಪರವಾಗಿ ಮಾತನಾಡಿ “ಜನಸೇವೆಯೇ ಜನಾರ್ಧನ ಸೇವೆ “ಅಂತ ನಂಬಿದವರು ಡಾ ರವಿ ಪಾಟೀಲ್ ಸರ್ ಅವರು ನೂರ–ಕ್ಕೆ ನೂರರಷ್ಟು ಈ ಬಾರಿ ವಿಜಯಶಾಲಿ ಯಾಗುತ್ತಾರೆ ಎಂಬ ಆತ್ಮವಿಶ್ವಾಸದಿಂದ ಹೇಳುತ್ತೇನೆ ಎಂದರು.ಡಾ ರವಿ ಪಾಟೀಲ್ ಅವರ ಗುಣ ಸ್ವಭಾವ,ನಡವಳಿಕೆ ಅವರ ಸೇವಾ ಮನೋಭಾವ ಇವೆಲ್ಲವೂ ಹೊಂದಿದವರು ಎಂದರು ಮಕ್ಕಳಿಂದ ಹಿಡಿದು ಹಿರಿಯರೆಲ್ಲರು ಹೇಳುವುದೊಂದೆ ಈ ಬಾರಿ ಬಿಜೆಪಿಯೇ ವಿಜಯ ಶಾಲಿ ಆಗುವುದು ಅಂತ ಹೇಳಿದರು.

ಇನ್ನು ವಾರ್ಡ ನಂಬರ ನಾಲ್ಕರಲ್ಲಿ ಮೂರನೆಬಾರಿ ಪ್ರಚಾರ ಮಾಡುತ್ತಿದ್ದು ರಾಮಲಿಂಗ ಕಿಂದೆ ಗಲ್ಲಿ,ಆನ್ ಸುಕರ್ ಗಲ್ಲಿ,ರಾಮ್ ದೇವ್ ಗಲ್ಲಿ,ಕಿರ್ಲೋಸ್ಕರ್ ರೋಡ್,ಕೆಲ್ ಕರ್ ಭಾಗ್,ಕೊನ್ವಾಲ್ ಗಲ್ಲಿಗಳಲ್ಲಿ ಪ್ರಚಾರ ಬರದಿಂದ ಸಾಗುತ್ತಿದೆ ಜನರು ಉತ್ತಮವಾಗಿ ಪ್ರತಿಕಿಸುತ್ತಿದ್ದಾರೆ ಎಂದು ಜಯತೀರ್ಥ ಸೊಗತಿ ವಾರ್ಡ ನಗರ ಸೇವಕರು ಹೇಳಿದರು.ಸವಿತಾ ಹೆಲ್ಬಾಳ್,ಜಯತೀರ್ಥ ಸೊಗತಿ ಸೇರಿದಂತೆ ಇನ್ನು ಪ್ರಮುಖರು ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದರು.ಪಾರ್ವತಿ ಮೂಲಿಮನಿ ಸ್ಥಳೀಯರು.

ಜಯತೀರ್ಥ ಸೊಗತಿ ವಾರ್ಡ4ರ ನಗರ ಸೇವಕ



## ಪ್ರಪಂಚದಲ್ಲಿ ತೀವ್ರಗತಿಯಲ್ಲಿ ಬೇಳೆಯುತ್ತಿರುವಾಗ ಅದಕ್ಕೆ ಕರ್ನಾಟಕದ ಕೊಡುಗೆ ಅಪಾರ

ಬೆಳಗಾವಿ: ದೇಶದ ಅರ್ಥಿಕತೆ ಪ್ರಪಂಚದಲ್ಲಿ ತೀವ್ರಗತಿಯಲ್ಲಿ ಬೇಳೆಯುತ್ತಿರುವಾಗ ಅದಕ್ಕೆ ಕರ್ನಾಟಕದ ಕೊಡುಗೆ ಅಪಾರವಾಗಿದ್ದು ಅದನ್ನು ಇನ್ನು ಉತ್ತಮ ಪಡಿಸಲು ರಾಜ್ಯದಲ್ಲಿ ಬಿಜೆಪಿ ಸರ್ಕಾರಕ್ಕೆ ಮತ್ತೊಮ್ಮೆ ಅವಕಾಶ ಮಾಡಿಕೊಡಬೇಕೆಂದು ರಾಷ್ಟ್ರೀಯ ಬಿಜೆಪಿ ವಕ್ತಾರ ಗೋಪಾಲಕೃಷ್ಣ ಅಗರವಾಲ್ ಅಭಿಪ್ರಾಯ ಪಟ್ಟರು.

ನಗರದ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ರವಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿ20 ಅಧ್ಯಕ್ಷ ಸ್ಥಾನ ಮೊದಲಬಾರಿಗೆ ನಮ್ಮ ದೇಶದ ಪ್ರಧಾನಿ ಮೊದಿಯವರಿಗೆ ದೊರೆತಿದ್ದು ಇದರಿಂದ ಪ್ರಪಂಚದ ಅರ್ಥಿಕತೆಯಲ್ಲಿ ಭಾರತಕ್ಕೆ ವಿವಿಧ ಸ್ಥಾನಮಾನ ದೊರೆಯುತ್ತಿದೆ. ಇದಕ್ಕೆ ಕರ್ನಾಟಕ ರಾಜ್ಯದ ಕೊಡುಗೆ ಅತ್ಯಂತ ಮಹತ್ವಪೂರ್ಣವಾಗಿದ್ದು ಬರುವ ದಿನಗಳಲ್ಲಿ ಬಿಜೆಪಿ ಸರ್ಕಾರ ಇನ್ನು ಹೆಚ್ಚಿಗೆ ಮಾಡುವ ನಿಟ್ಟಿನಲ್ಲಿ ಬಿಜೆಪಿ ಸರ್ಕಾರ ಕಾರ್ಯಮಾಡಲಿದೆ.

ಕೇಂದ್ರ ಸರ್ಕಾರದ ಜನಕಲ್ಯಾಣ ಯೋಜನೆಯನ್ನು ಬಲಿಷ್ಠವಾಗಿ ಅನುಷ್ಠಾನಗೊಳಿಸಲು ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಅವಶ್ಯಕವಾಗಿದ್ದು ಬಿಜೆಪಿ ಸರ್ಕಾರ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ ಎಂದರು. ರಾಜ್ಯದಲ್ಲಿ ಕಿಸಾನ್ ಸಮ್ಮಾನ ಯೋಜನೆ 94ರಷ್ಟು ಜಾರಿಯಾದರೆ ಕೇರಳದಂತಹ ರಾಜ್ಯದಲ್ಲಿ ಕೇವಲ 56 ಪ್ರತಿಶತ ಜಾರಿಗೆ ತಂದಿರುವದು ಕೇರಳ ಸರ್ಕಾರ ಕೇಂದ್ರ ಸರ್ಕಾರದ ಜೋತೆ ಸರಿಯಾದ ಹೊಂದಾಣಿಕೆ ಇಲ್ಲದೆ ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ.

ಆದ್ದರಿಂದ ಡಬಲ್ ಇಂಜಿನ್ ಸರ್ಕಾರದ ಮಹತ್ವ ಜನಸಾಮಾನ್ಯರಿಗೆ ಅರ್ಥವಾಗುತ್ತಿದೆ ಎಂದು ಡಬಲ್ ಇಂಜಿನ್ ಸರ್ಕಾರದ ಮಹತ್ವ ತಿಳಿಸಿದರು.

ಪ್ರತಿ ರಾಜ್ಯದಲ್ಲಿ ಹರ ಘರ್ ಜಲ್ ಯೋಜನೆ ಜಾರಿಯಾಗಿರುವದರಿಂದ ದೇಶದ ಜನತೆ ಅತ್ಯಂತ ಖುಷಿಯಾಗಿದ್ದಾರೆ. ಈ ಯೋಜನೆಯ ಜಾರಿಗೆ ಪಶ್ಚಿಮಬಂಗಾಳದಲ್ಲಿ ಅಸಡ್ಡೆ ತೊರಿದ್ದು ಸಾಮಾಜಿ-ಕ ಅಭಿವೃದ್ಧಿ ಕಾರ್ಯಕ್ರಮಗಳು ಜನಸಾಮಾನ್ಯ-ರಿಗೆ ದೊರೆಯಂದತೆ ಮಾಡುವ ಇಂತಹ ಸರ್ಕಾರ ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ. ಅದೆ ಕರ್ನಾಟಕದಲ್ಲಿ ಡಬಲ್ ಇಂಜಿನ್ ಸರ್ಕಾರದ ದೂರದೃಷ್ಟಿಯಿಂದ ರಾಜ್ಯ ಪ್ರಪಂಚದ ನಾಲ್ಕನೆಯ ದೊಡ್ಡ ಸಾಫ್ಟವೇರ್ ಕೇಂದ್ರವಾಗಿದೆ, ಆರ್ಥಿಕ ಸಬಲಿಕರಣವಾಗಿದ್ದು ರಾಜ್ಯದ ಅಭಿವೃದ್ಧಿಯ ಗತಿಶಕ್ತಿ ಹೊಂದಲು ಮತ್ತೊಮ್ಮೆ ಬಿಜೆಪಿ ಸರ್ಕಾರದ ಅಧಿಕಾರದಲ್ಲಿ ಇರಬೇಕು.

ಕಾಂಗ್ರೆಸ್ ಅಧಿಕಾರವಧಿಯಲ್ಲಿ ಕೇಂದ್ರದ ಅನುದಾನ ಕೇವಲ 15 ಪ್ರತಿಶತ ಮಾತ್ರ ಬಂದು ತಲುಪಲಿತ್ತು ಎನ್ನುವದನ್ನು ಅವರ ಪ್ರಧಾನಿಗಳೆ ಹೇಳಿದ್ದಾರೆ. ಆದರೆ ಇಂದು 100ಕ್ಕೆ 100ರಷ್ಟು ಹಣ ಪಲಾನುಭವಿಗಳಿಗೆ ತಲುಪುತ್ತಿರುವದು ಭ್ರಷ್ಟಾಚಾರ ಮುಕ್ತ ಕಾರ್ಯಗಳು ಕೇಂದ್ರದಿಂದ ನಡೆಯುತ್ತಿದೆ. ಕೇಂದ್ರ ಸರ್ಕಾರದ ಮಹತ್ವಪೂರ್ಣ ಅಂತ್ಯೋದಯ, ಗರಿಬ್ ಕಲ್ಯಾಣದಂತಹ ಅನೇಕ ಯೋಜನೆಗೆಳನ್ನು ಜನಸಾಮನ್ಯರಿಗೆ ತಲುಪಿಸಲು ಜನಕಲ್ಯಾಣ ಪರ ಸರ್ಕಾರ ರಾಜ್ಯದಲ್ಲಿ ಜನರು ಮತ್ತೊಮ್ಮೆಅಧಿಕಾರಕ್ಕೆ ತರಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ವಕ್ತಾರರಾದ ಎಮ್.ಬಿ.ಜೀರಲಿ, ರಾಜ್ಯ ಮಾಧ್ಯಮ ಸಲಹೆಗಾರ ಆನಂದ ಗುರುಮೂರ್ತಿ, ಮಹಾನಗರ ಅಧ್ಯಕ್ಷ ಶಾಸಕ ಅನೀಲ ಬೆನಕೆ, ದಾದಾಗೌಡ ಬಿರಾದಾರ, ಮಾಧ್ಯಮ ಸಂಚಾಲಕ ಎಫ್.ಎಸ್.ಸಿದ್ದನಗೌಡರ, ಶರದ ಪಾಟೀಲ, ನೀತಿನ ಚೌಗಲೆ, ಕೇದಾರ ಜೋರಾಪೂರ, ಸಂತೋಷ ದೇಶನೂರ, ಇಂದಿರಾ ಬಾಳಿಕಾಯಿ, ಶಶಿದರ ಬಾಡಕರ ಇದ್ದರು.

## ಅಪ್ರಾಪ್ತ ಪ್ರೇಮಿಗಳ ಶವ ಪತ್ತೆ



ವಿಜಯಪುರ : ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣದ ಅಂಗಡಗೇರಿ ಎಂಬಲ್ಲಿ ಅಪ್ರಾಪ್ತ ಪ್ರೇಮಿಗಳಿಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮೃತಪಟ್ಟ ಪ್ರೇಮಿಗಳು ಸಚಿನ್ ಮಾದರ (17) ಮತ್ತು ಸಕ್ಕುಬಾಯಿ ಮಾದರ (15) ಎಂದು ತಿಳಿದುಬಂದಿದೆ. ಸಚಿನ್ ಮತ್ತು ಸಕ್ಕುಬಾಯಿ ನಿನ್ನೆ ಮನೆಯಿಂದ ಹೊರಗೆ ಹೋಗುವುದಾಗಿ ತೆರಳಿದ್ದಾರೆ. ಬಳಿಕ ನಿರ್ಜನ ಪ್ರದೇಶದಲ್ಲಿ ನೇಣು ಬಿಗಿದುಕೊಂಡಿದ್ದಾರೆ. ಇನ್ನೂ ಈ ಪ್ರೇಮಿಗಳು ಸಣ್ಣ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನೆಂದು ತಿಳಿದುಬಂದಿಲ್ಲ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಕೂಡಗಿ ಎನ್ಟಿಪಿಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಬಿಜೆಪಿ ಪಕ್ಷದ ಪ್ರಚಾರ ಸಭೆ

# ನನ್ನ ಗೆಲುವು ನಿಶ್ಚಿತ: ಬಿಜೆಪಿ ಅಭ್ಯರ್ಥಿ ಶ್ರೀಮಂತ ಪಾಟೀಲ

**ಕಾಗವಾಡ:** ಮತಕ್ಷೇತ್ರದಲ್ಲಿ ಕಾಣದೆಯಿರುವ ಅಭಿವೃದ್ಧಿ ಕೇವಲ ನಾಲ್ಕು ವರ್ಷಗಳಲ್ಲಿ ಅಭಿವೃದ್ಧಿಯನ್ನು ಮಾಡಿದ್ದೀರಿ. ಇದರಿಂದ ಕ್ಷೇತ್ರದ ಮುಸ್ಲಿಂ ಬಾಂಧವರು ಮತಕ್ಷೇತ್ರದ ಅಭಿವೃದ್ಧಿಗೆ ಜಾತಿ, ಧರ್ಮವನ್ನು ಲೆಕ್ಕಿಸದೆ ನಿಮ್ಮೊಂದಿಗೆ ಗಟ್ಟಿಯಾಗಿ ನಿಲ್ಲುತ್ತೇವೆ ಎಂದು ನಿರ್ಧರಿಸಿದ್ದಾರೆಯೆಂದು ಕಾಗವಾಡ ಕ್ಷೇತ್ರದ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಶ್ರೀಮಂತ ಪಾಟೀಲ ಮಾಹಿತಿ ನೀಡಿದರು.

ಮಂಗಳವಾರ ಸಂಜೆ ಕಾಗವಾಡ ತಾಲೂಕಿನ ಗುಂಡೇವಾಡಿ ಗ್ರಾಮದಲ್ಲಿ ನಡೆದ ಬಿಜೆಪಿ ಪಕ್ಷದ ಪ್ರಚಾರ ಸಭೆಯಲ್ಲಿ ಶ್ರೀಮಂತ ಪಾಟೀಲ ಮಾತನಾಡಿ, ಇವತ್ತಿನವರೆಗೂ ಕಾಂಗ್ರೆಸ್ ಪಕ್ಷ ಮುಸ್ಲಿಂ ಬಾಂಧವರನ್ನು ವೋಟ್ಬ್ಯಾಂಕ್ ಯಾಗಿ ಬಳಿಸಿದ್ದರು.

ಈಗ ಅದನ್ನು ತಿರಸ್ಕರಿಸಿದ ಮುಸ್ಲಿಂ ಬಾಂಧವರು ಅಭಿವೃದ್ಧಿ ಕಾರ್ಯಕ್ಕೆ



ಸಹಕರಿಸಲು ನಿರ್ಧರಿಸಿದ್ದಾರೆ. ನನ್ನ ಗೆಲುವು ನಿಶ್ಚಿತವೆಂದು ಶಾಸಕ ಶ್ರೀಮಂತ ಪಾಟೀಲ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾನು ಯಾವತ್ತೂ ಜಾತಿ ರಾಜಕಾರಣ ಮಾಡಿಲ್ಲ. ರೈತರ ಸಮಸ್ಯೆಗಳೇ ನನ್ನ ಸಮಸ್ಯೆ, ಹಾಗಾಗಿ ಕೃ?ಣ್ಣ ನದಿಯಲ್ಲಿ ನೀರು ಬಿಡಲು ಶಕ್ತಿಮೀರಿ ಪ್ರಯತ್ನಿಸಿದ್ದೇನೆ. ಸದ್ಯ ಕೃ?ಣ್ಣನದಿಗೆ ಮೂರು ಟಿಎಂಸಿ ನೀರು ಬಿಡಲಾಗಿದ್ದು, ಈ ಬೇಸಿಗೆಯಲ್ಲಿ ನೀರು ಕಡಿಮೆಯಾಗುವುದಿಲ್ಲ ಎಂದರು.

ಹಲವು ವರ್ಷಗಳಿಂದ ಖಿಳೇಗಾಂವ ಬಸವೇಶ್ವರ ಎತ ನೀರಾವರಿ ಯೋಜನೆ ಮಂದಗತಿಯಲ್ಲಿ ಸಾಗುತ್ತಿದ್ದು, ಹಣದ ಕೊರತೆಯಿಂದ ಕಾಮಗಾರಿ ವಿಳಂಬವಾಗಿದ್ದು, ಗುತ್ತಿಗೆದಾರರಿಗೆ 6 ಕೋಟಿ ರೂ.ಗಳನ್ನು ನೀಡಿ ಕಾಮಗಾರಿ ವೇಗದಿಂದ ಪ್ರಾರಂಭಿಸಿದ್ದು ಈಗ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಯೋಜನೆಯ ನೀರು ಈ ಭಾಗದಲ್ಲಿ ಶೀಘ್ರವೇ ಹರೆಯಲಿದೆ. ರೈತರ ಹೊಲಕ್ಕೆ ನೀರು ಹೋದರೆ ರೈತ ನೆಮ್ಮದಿಯಿಂದ ಇರುತ್ತಾನೆ ಎಂದರು.

ಗುಂಡೇವಾಡಿ ಗ್ರಾಮದಲ್ಲಿಯ ಸಮಾಜದ ಕೆಲ ಪ್ರತಿನಿಧಿಗಳು ಸೊಸಾಯಿಟಿ ಮುಖಾಂತರ ರಾಜಕೀಯದಿಂದ ರೈತರಿಗೆ ಬೆದರಿಕೆ ಹಾಕುತ್ತಿದ್ದು, ರೈತರು ಹೊರಬರಲು ಮುಂದಾಗುತ್ತಿಲ್ಲ. ಯಾರೂ ಭಯಪಡದೆ ಬಿಜೆಪಿ ಬೆನ್ನಿಗೆ ನಿಲ್ಲಬೇಕೆಂದರು.

ಈ ಗ್ರಾಮದ 94 ವರ್ಷದ ರೈತರೊಬ್ಬರು ಖಿಳೇಗಾಂವ ಬಸವೇಶ್ವರ ನೀರು ಸರಬರಾಜು ಯೋಜನೆ ಪೂರ್ಣಗೊಂಡು ಯೋಜನೆಯ ಮುಖಾಂತರ ನೀರು ಹರಿಯುವದನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದ್ದರು. ಅವರ ಇಚ್ಛೆಯನ್ನು ಪೂರ್ಣಗೊಳಿಸುತ್ತೇನೆ ಎಂದು ಭರವಸೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡ ಸಚಿನ್ ವೀರ್ ಅವರು ಶಾಸಕ ಶ್ರೀಮಂತ ಪಾಟೀಲ ಅವರು ಮಾಡಿರುವ ಕೆಲಸಗಳ ಬಗ್ಗೆ ಮಾಹಿತಿ ನೀಡಿದರು.

ಬಿಜೆಪಿ ಯುವ ಮುಖಂಡರಾದ ಶಿವಾನಂದ ಬುರ್ಲಿ, ಬಾವುಸಾಹೇಬ ಜಾಧವ, ಸುಶಾಂತ ಪಾಟೀಲ, ವಿ.ಕೆ.ಕಾಂಬಳೆ, ಶಿವಾನಂದ ನಿಜಗುಣಿ, ವಿಶ್ವನಾಥ ಪಾಟೀಲ, ಸುಭಾಷ ಗೋಕಾಕ, ವೈದ್ಯ ಡಾ. ಎಚ್.ಡಿ.ಮಂಟುರ, ಅಶೋಕ ಗಾಡಿವಡ್ಡರ್, ಲಿಂಗಪ್ಪ ಅವತಾಡೆ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಭಿವೃದ್ಧಿ ಕೆಲಸಗಳಿಗೆ ಸದಾ ಸ್ಪಂಧನೆ: ವಿಶ್ವಾಸ ವೈದ್ಯ

**ಸವದತ್ತಿ:** ಮತಕ್ಷೇತ್ರದಾದ್ಯಂತ ಜನರು ನನ್ನ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವದರ ಜೊತೆಗೆ ತಾವು ಆಪೇಕ್ಷಿಸಿದಂತ ಅಭಿವೃದ್ಧಿ ಕೆಲಸಗಳಿಗೆ ಸದಾ ಸ್ಪಂಧನೆ ನೀಡುವ ಪ್ರಯತ್ನ ನನ್ನದಾಗಿದ್ದು ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡಬೇಕೆಂದು ಕಾಂಗ್ರೆಸ್ ಅಭ್ಯರ್ಥಿ ವಿಶ್ವಾಸ ವೈದ್ಯ ಹೇಳಿದರು.

ತಾಲೂಕಿನ ಮಬನೂರ ಗ್ರಾಮದಲ್ಲಿ ಚುನಾವಣಾ ಪ್ರಚಾರದ ವೇಳೆ ಅವರು ಮತಯಾಚಿಸಿ ಮಾತನಾಡಿದರು. ಮತಕ್ಷೇತ್ರ ಪ್ರತಿಯೊಂದು ಗ್ರಾಮಗಳಲ್ಲಿ ರಸ್ತೆ ಮತ್ತು ಶುದ್ದ ಕುಡಿಯುವ ನೀರು ಸೇರಿದಂತೆ ಅನೇಕ ಉನ್ನತವಾದಂತ ಅಭಿವೃದ್ಧಿ ಗಳಾಗಬೇಕಿರುವದರಿಂದ ಕಾಂಗ್ರೆಸ್ ಪಕ್ಷಕ್ಕೆಮತ ನೀಡಬೇಕೆಂದರು.

ಸಮಾಜದ ಎಲ್ಲವರ್ಗದ ಜನರ ಅವಶ್ಯಕತೆಗಳನ್ನು ಅರಿತುಕೊಂಡುಕಾಂಗ್ರೆಸ್ ಪಕ್ಷ ವಿನೂತನವಾದಂತ ಯೋಜನೆಗಳನ್ನು ಜಾರಿಗೆ ತಂದಿದೆ. ಉಚಿತ ವಿದ್ಯುತ್, ಗೃಹಿಣಿಯರಿಗೆ ಮತ್ತು ಪದವೀಧರ ನಿರುದ್ಯೋಗಿಗಳಿಗೆ ಪ್ರೋತ್ಸಾಹ ಧನ, ಬಡ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಉಚಿತವಾಗಿ



ಅಕ್ಕಿ ವಿತರಣೆಯಂತ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದರು.

ಗ್ರಾಮದಲ್ಲಿ ಮತಯಾಚನೆ ವೇಳೆ ಗ್ರಾಮದ ಮಹಿಳೆಯರು ಆರತಿ ಮಾಡಿ ವಿಶ್ವಾಸ ವೈದ್ಯರವರಿಗೆ ಸ್ವಾಗತ ಕೋರಿದರು.

ಫಕೀರಪ್ಪ ಹದ್ದನ್ನವರ, ಯಲ್ಲಪ್ಪ ನರಿ, ವಿಠ್ಠಲ ಅಗಸಿಮನಿ, ನಿಂಗಪ್ಪ ನರಿ, ಪುಂಡಲೀಕ ಮಳಗಲಿ, ಪಡೆಪ್ಪ ನರಿ, ಶಿವಪ್ಪ ಅಗಸಿಮನಿ, ರಾಮಚಂದ್ರ ಪಟಾತ, ಉದಯ ನರಿ, ರಮೇಶ ಮೇಟಿ ಉಪಸ್ಥಿತರಿದ್ದರು.



ಕಾಗವಾಡ ಉಗಾರ ಬುದ್ರುಕ ಗ್ರಾಮದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಅಥಣಿ ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಶೀತಲಗೌಡ ಪಾಟೀಲ ಇವರ ನೇತೃತ್ವದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಶ್ರೀಮಂತ ಪಾಟೀಲ ಇವರ ಪರ ಮತಯಾಚಿಸುವಾಗ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಣ್ಣಾಗೌಡಾ ಪಾಟೀಲ, ಮುಖಂಡರಾದ ಮನೋಜ ಕುಸನಾಳೆ, ಭರತ ಹೋಸುರೆ, ಅಭಿಷೇಕ ಚೌಗುಲೆ, ಕಲ್ಲು ತೇರದಾಳೆ, ಪ್ರಮೋದ ಪಾಟೀಲ, ಪ್ರಶಾಂತ ಹೋಸುರೆ, ಪ್ರಮೋದ ಹೋಸುರೆ, ಸುರೇಶ ಕುಸನಾಳೆ, ಅಣ್ಣಾಸಾಹೇಬ ನಂದಗಾಂವೆ ಹಾಗೂ ಮತ್ತಿತರರು.

## ಮಹೇಶ್ ಕುಮಠಳ್ಳಿಗೆ ನಮ್ಮ ಬೆಂಬಲ: ಕಾಂಬಳೆ

**ಅಥಣಿ:** ಮಹೇಶ ಕುಮಠಳ್ಳಿ ಓರ್ವ ಸಂಭಾಹಿತ ರಾಜಕಾರಣಿ. ಅವರ ಅವಧಿಯಲ್ಲಿ ದಲಿತ ಸಮುದಾಯಗಳ ಸಾಕಷ್ಟು ಅಭಿವೃದ್ಧಿಯಾಗಿದೆ. ನಮ್ಮ ಸಮುದಾಯಗಳಿಗೆ ಅನೇಕ ಯೋಜನೆಗಳನ್ನು ತರುವ ಮೂಲಕ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ಮಹೇಶ ಕುಮಠಳ್ಳಿ ವಹಿಸಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ವೇದಿಕೆ, ವತಿಯಿಂದ ಸಂಪೂರ್ಣವಾಗಿ ಮಹೇಶ್ ಕುಮ್ಟಳ್ಳಿ ಅವರಿಗೆ ನಮ್ಮ ಬೆಂಬಲವನ್ನು ನೀಡುತ್ತಿರುವದಾಗಿ ದಯಾನಂದ ಕಾಂಬಳೆ ಹೇಳದರು.

ಅಥಣಿ ಪಟ್ಟಣದ ಬಿಜೆಪಿ ಕಛೇರಿಯಲ್ಲಿ ಸುದ್ದಿಗೊಷ್ಠಿ ನಡೆಸಿದ ಕರ್ನಾಟಕ ಸೋಸಿತ ಸಮೂದಾಯಗಳ ವೇದಿಕೆ ಜಿಲ್ಲಾ ಅದ್ಯಕ್ಷ ದಯಾನಂದ ಕಾಂಬಳೆ ಅವರು ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಗೆಲ್ಲುವುದು ಶತಸಿದ್ಧ. ಎಲ್ಲ ದಲಿತ ಸಮೂದಾಯಗಳು ಮಹೇಶ ಕುಮಠಳ್ಳಿ ಅವರ ಬೆಂಬಲಕ್ಕೆ ನಿಂತಿವೆ ಎಂದರು. ರಮೇಶ್ ಜಾರಕಿಹೊಳಿ ಅವರ ನೇತೃತ್ವದಲ್ಲಿ ಅಥಣಿ ಹಾಗೂ ಕಾಗವಾಡ ಮತಕ್ಷೇತ್ರಗಳನ್ನು ಖಂಡಿತವಾಗಿಯೂ ಗೆಲ್ಲುತ್ತೇವೆ. ಕೊಳಗೇರಿ ನಿಗಮದಲ್ಲಿರುವ ಅನೇಕ ಯೋಜನೆಗಳನ್ನು ತಳ ಮಟ್ಟದ ಜನರಿಗೆ ತಲುಪಿಸುವಲ್ಲಿ ಶಾಸಕ ಮಹೇಶ ಕುಮಠಳ್ಳಿ ಪ್ರಾಮಾಣಿಕ ಪ್ರೇಯತ್ನ ಮಾಡಿದ್ದಾರೆ. ಇಡಿ ಅಥಣಿ ಮತಕ್ಷೇತ್ರದಲ್ಲಿರುವ ದಲಿತ ಸಮೂದಾಯಗಳ ಮತದಾರರು ಬೊಜೆಪಿ ಪಕ್ಷದ ಪರವಾಗಿ ಮತಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸುನೀಲ್ ಚೌಗಲೆ, ರಾಹುಲ್ ಕಾಂಬಳೆ, ಶಂಕರ ಮಾದರ, ಬಸವರಾಜ ಅವಳೆ, ಸಂತೋಷ ಮಾನೆ, ಪ್ರದೀಪ ಮರನೂರ ಇದ್ದರು.



## ವಿಶ್ವಾಸ ವೈದ್ಯರಿಗೆ ಮತ ನೀಡಿ: ಜಮೀರಹ್ಮದ ಖಾನ್

**ಸವದತ್ತಿ:** ಸರಳ ಮತ್ತು ಸಜ್ಜನಿಕೆಯ ಸ್ವಭಾವದ ವಿಶ್ವಾಸ ವೈದ್ಯರವರು ಮತಕ್ಷೇತ್ರದಲ್ಲಿ ಜನರ ಕಷ್ಟಗಳಿಗೆ ಸ್ಪಂಧನೆ ನೀಡುತ್ತಾ ಉತ್ತಮ ವ್ಯಕ್ತಿತ್ವವನ್ನು ಹೊಂದಿದ್ದು, ಅವರ ಸ್ವಭಾವ ಮತ್ತು ಸೇವೆಯನ್ನು ಗುರುತಿಸಿ ಹೈಕಮಾಂಡ ಸವದತ್ತಿ ಯಲ್ಲಮ್ಮಾ ಮತಕ್ಷೇತ್ರದ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ನೀಡಿರುವದರಿಂದ ಕ್ಷೇತ್ರದ ಜನರು ವೈದ್ಯರವರಿಗೆ ಮತ ನೀಡುವ ಮೂಲಕ ಅವರನ್ನು ಆಯ್ಕೆ ಮಾಡಬೇಕೆಂದು ಜಮೀರಹ್ಮದ ಖಾನ್ ಹೇಳಿದರು.

ತಾಲೂಕಿನ ಮುನವಳ್ಳಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ವಿಶ್ವಾಸ ವೈದ್ಯರವರ ಪರವಾಗಿ ರೋಡ ಶೋ ಮೂಲಕ ಪ್ರಚಾರ ಮಾಡಿ ನಂತರ ಯಲಿಗಾರ ಮಂಗಲ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಕಾಂಗ್ರೆಸ್ ಪಕ್ಷದ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಿಜೆಪಿ ಸರಕಾರವು ಅಲ್ಪ ಸಂಖ್ಯಾತರ ಮೀಸಲಾತಿಯನ್ನು ಕಡಿಮೆ ಮಾಡಿ ಬಜೆಟ್‌ನಲ್ಲಿಯೂ ನಿರ್ಲಕ್ಷ ಮಾಡಿರುವದರಿಂದ ಈ ಚುನಾವಣೆಯಲ್ಲಿ ಬಿಜೆಪಿ ಪಕ್ಷಕ್ಕೆ ತಕ್ಕ ಉತ್ತರ ನೀಡಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ನೀಡಿ ಆಯ್ಕೆ ಮಾಡಬೇಕೆಂದರು.

ವಿಶ್ವಾಸ ವೈದ್ಯ ಮಾತನಾಡಿ, ಮತ ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿಯಾಗಿದ್ದು, ಜನರ ಸಂಕಷ್ಟಗಳಿಗೆ ಸ್ಪಂಧಿಸುತ್ತ ಜನ ಸೇವಕನಾಗಿ ನಾನು ನನ್ನ ಕಾರ್ಯಗಳನ್ನು ಮುಂದುವರೆಸಿಕೊಂಡು



ಹೋಗುವದಾಗಿ ಹೇಳಿದರು. ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳು ಜನಪರವಾದಂತ ಯೋಜನೆಗಳಾಗಿದ್ದು, ಸಮಾಜದಲ್ಲಿ ನೊಂದವರಿಗೆ ಆಶ್ರಯ ಕಲ್ಪಿಸಲು ನಾನು ಕಂಕಣ ಬದ್ದನಾಗಿದ್ದೇನೆ. ಈ ಚುನಾವಣೆಯಲ್ಲಿ ತಮ್ಮ ಮತವನ್ನು ನನಗೆ ನೀಡುವ ಮೂಲಕ ತಮ್ಮ ಸೇವೆಯನ್ನು ಮಾಡಲು ಅವಕಾಶ ಕಲ್ಪಿಸಬೇಕೆಂದರು.

ಮಾಜಿ ಶಾಸಕ ಆರ್.ವಿ.ಪಾಟೀಲ, ಅಂಬರೀಶ ಯಲಿಗಾರ, ಉಮೇಶ ಬಾಳಿ, ಮಲ್ಲು ಜಕಾತಿ, ಹುಸೇನ ದಪೇದಾರ, ಡಿ.ಡಿ.ಟೋಪೋಜಿ, ಲತೀಪ ಸವದತ್ತಿ, ಮನಸೂರ, ಜಲಾಲುದ್ದೀನ ಭಾಷಾ, ಮುಬಾರಕ ಬೈರಕದಾರ, ಮೀರಾಸಾಬ ವಟ್ನಾಳ, ಅಲ್ಲಾಭಕ್ಷ ರಾಮದುರ್ಗ, ಐ.ಡಿ.ಬಿಜಲಿಖಾನ, ಮಲಿಕ್ ಬಾಗವಾನ್, ಡಿ.ಕೆ.ರಫೀಕ್, ಹುಸೇನ ನದಾಫ ಹಾಗೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು ಉಪಸ್ಥಿತರಿದ್ದರು.

## ಜೈನ ಸಮುದಾಯದಿಂದ ಒಂದೇ ಪಕ್ಷಕ್ಕೆ ಬೆಂಬಲ ನೀಡಿಲ್ಲ: ಜಿನಗೌಡ ಪಾಟೀಲ

**ಅಥಣಿ:** ಜೈನ ಸಮಾಜದ ಕೆಲವು ಮುಖಂಡರು ನಮ್ಮ ಗಮನಕ್ಕೆ ತರದೆ ನಮ್ಮ ಸಮುದಾಯ ಜನರನ್ನು ಒಂದೆಡೆ ಸಭೆ ಕರೆದು ಒಂದು ಪಕ್ಷಕ್ಕೆ ಬೆಂಬಲ ಹೇಳಿರುವುದು ಸ್ವಾರ್ಥ ರಾಜಕಾರಣವಾಗಿದೆ. ಅದಕ್ಕಾಗಿ ಸಮಾಜ ಬಾಂಧವರು ತಮ್ಮ ಮತದಾನ ಹಕ್ಕನ್ನು ನಮ್ಮ ಸಮುದಾಯದ ಏಳಿಗೆಗಾಗಿ ಶ್ರಮಿಸಿದವರಿಗೆ ನೀಡಬೇಕು ಎಂದು ಅಥಣಿ ತಾಲೂಕ ಜೈನ ಸಮುದಾಯದ ತಾಲೂಕ ಅಧ್ಯಕ್ಷ ಜಿನಗೌಡ ಪಾಟೀಲ ಹೇಳಿದರು.

ಅವರು ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ನಮ್ಮ ಸಮುದಾಯದಲ್ಲಿನ ಕೆಲವು ಮುಖಂಡರು ಜನರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಜೈನ ಸಮಾಜದ ಅನೇಕ ಮುಖಂಡರನ್ನು ಹೊರಗಿಟ್ಟು ಈ ಸಭೆ ಮಾಡಿದ್ದಾರೆ. ಮತ್ತು ಈ ಸಭೆಯಲ್ಲಿ ಒಂದು ಪಕ್ಷಕ್ಕೆ ಬೆಂಬಲ ನೀಡುವಂತೆ ಕೋರಿದ್ದಾರೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಸ್ವತಂತ್ರವಾದ ಮತದಾನ ಹಕ್ಕು ಇದೆ. ಮತಕ್ಷೇತ್ರದಲ್ಲಿ ಇಲ್ಲಿಯ ವರೆಗೆ ನಮ್ಮ ಸಮಾಜದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ಒದಗಿಸಿದವರಿಗೆ ತಮ್ಮ ಮತಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನ್ಯಾಯವಾದಿ ಲೆನಿನ್ ಹಳಿಂಗಳಿ, ಮಹಾವೀರ ಪಡನಾಡ, ಗೋಪು ಸಪ್ತಸಾಗರ, ನಿಂಗಪ್ಪ ನಂದೇಶ್ವರ, ದೀಪಕ ಪಾಟೀಲ, ದಿರಜ ಪಾಟೀಲ, ಬಾಳಾಸಾಹೇಬ ಕವಟಕೊಪ್ಪ, ಮುದುಕ ಬೊಮ್ಮಣ್ಣವರ, ಅಶೋಕ ದಾನಗೌಡರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



## ಏನೇ ಷಡ್ಯಂತ್ರ ಮಾಡಿದರೂ ವಿನಯ ಗೆಲುವು ಖಚಿತ

**ಧಾರವಾಡ:** ಬಿಜೆಪಿ ಶಾಸಕರ ಕಳೆದ ಐದು ವರ್ಷಗಳ ದುರಾಡಳಿತಕ್ಕೆ ಜನ ಅಕ್ಷರಶಃ ಬೇಸತ್ತಿದ್ದಾರೆ. ವಿನಯ್ ಕುಲಕರ್ಣಿ ಅವರನ್ನು ಯಾಕಾದರೂ ಆರಿಸಿ ತರಲಿಲ್ಲವೋ ಎಂದು ಪಶ್ಚಾತಾಪ ಪಡುತ್ತಿದ್ದಾರೆ. ಈಗ ವಿನಯ್ ಅವರನ್ನು ಆರಿಸಿ ತರುವ ಕಾಲ ಮತ್ತೆ ಬಂದಿದ್ದು ನಾವು ಮತ್ತೆ ವಿನಯ್ ಕುಲಕರ್ಣಿ ಅವರನ್ನೇ ಈ ಭಾಗದ ಶಾಸಕರನ್ನಾಗಿ ಆಯ್ಕೆ ಮಾಡಲು ಜನ ಉತ್ಸುಕರಾಗಿದ್ದಾರೆ ಎಂದು ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕುಲಕರ್ಣಿ ಅವರ ಪತ್ನಿ ಶಿವಲೀಲಾ ಕುಲಕರ್ಣಿ ಹೇಳಿದರು.

ಧಾರವಾಡದ ಮದಿಹಾಳ, ಕೊಟ್ಟಣದ ಓಣಿ, ಮೂರುಸಾವಿರ ಮಠ ರಸ್ತೆ. ಆದಿಶಕ್ತಿ ಕಾಲೊನಿ ಸೇರಿದಂತೆ ಅನೇಕ ಕಡೆಗಳಲ್ಲಿ ರೋಡ್ ಶೋ ಮುಖಾಂತರ ಅವರು ಮತಯಾಚನೆ ಮಾಡಿ ಮಾತನಾಡಿದರು.

ಚುನಾವಣಾ ಪ್ರಚಾರಕ್ಕೆ ಹೋದ ಕಡೆಗಳಲ್ಲೆಲ್ಲ ಅಭೂತಪೂರ್ವ ಬೆಂಬಲ ವ್ಯಕ್ತವಾಗು ತ್ತಿದೆ. ಜನ ಸ್ವಯಂ



ಪ್ರೇರಣೆಯಿಂದ ನಮ್ಮ ಚುನಾವಣಾ ಪ್ರಚಾರಕ್ಕೆ ಬರುತ್ತಿದ್ದಾರೆ. ಜನರ ಈ ತುಡಿತ ನೋಡಿದರೆ ಈ ಬಾರಿ ವಿನಯ್ ಕುಲಕರ್ಣಿ ಅವರು 50 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸುವುದು ನಿಶ್ಚಿತ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಮಾತನಾಡಿ, ವಿನಯ್ ಕುಲಕರ್ಣಿ ಐದು ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಜನ ಇವತ್ತು ಸ್ವಯಂ ಪ್ರೇರಣೆಯಿಂದ ವಿನಯ್ ಅವರ ಬೆಂಬಲಕ್ಕೆ ನಿಂತಿದ್ದಾರೆ. ಯಾವುದೇ ರಾಜಕೀಯ ಷಡ್ಯಂತ್ರ ಮಾಡಿದರೂ ವಿನಯ್ ಕುಲಕರ್ಣಿ ಅವರ ಗೆಲುವು ಈ ಬಾರಿ ಕಟ್ಟಿಟ್ಟ ಬುತ್ತಿ ಎಂದರು.

ಧಾರವಾಡದ ಅನೇಕ ವಾರ್ಡ್‌ಗಳಲ್ಲಿ ರೋಡ್ ಶೋ ಮಾಡಿದ ಶಿವಲೀಲಾ ಕುಲಕರ್ಣಿ ಅವರಿಗೆ ಅಭೂತಪೂರ್ವ ಜನ ಬೆಂಬಲ ವ್ಯಕ್ತವಾಯಿತು. ನೂರಾರು ಜನ ರೋಡ್ ಶೋದಲ್ಲಿ ಪಾಲ್ಗೊಂಡು ವಿನಯ್ ಕುಲಕರ್ಣಿ ಪರ ಘೋಷಣೆಗಳನ್ನು ಕೂಗಿದರು.

ಬ್ಲಾಕ್ ಅಧ್ಯಕ್ಷ ಈಶ್ವರ ಶಿವಳ್ಳಿ ಮುಖಂಡರುಗಳಾದ ಮಹೇಶ ಶಿಂಧೆ, ವಿಶಾಲ ನರಗುಂದ, ಕಿಶೋರ ಬಡಿಗೇರ, ನಿಜಾಮ ರಾಹಿ, ರವಿ ಹೊರಗಿನಮಠ, ಗೀತಾ ನಾಗನ್ನವರ, ಗಂಗಮ್ಮ ಕಾಶಿಗಾರ, ಶಿವಯೋಗಿ ಹೊಸೂರ ಸೇರಿದಂತೆ ನೂರಾರು ಯುವಕರು, ಹಿರಿಯರು, ಮಹಿಳೆಯರು ಸೇರಿದ್ದರು.

## ಪ್ರತ್ಯೇಕ ಪಾಲಿಕೆ ವಿಷಯದಲ್ಲಿ ರಾಜಕೀಯವಿಲ್ಲ: ಚಿಂಚೋರೆ

**ಧಾರವಾಡ:** ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಬೇಡಿಕೆ ವಿಷಯದಲ್ಲಿ ತಾವು ಯಾವುದೇ ರಾಜಕೀಯ ಮಾಡಿಲ್ಲ. ಒಂದು ವೇಳೆ ತಾವು ರಾಜಕೀಯ ಮಾಡಿದ್ದನ್ನು ಶಾಸಕ ಅರವಿಂದ ಬೆಲ್ಲದ ಅವರು ಸಾಬೀತುಪಡಿಸಿದರೆ ಪ್ರಸಕ್ತ ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದುವುದಾಗಿ ಕಾಂಗ್ರೆಸ್ ಅಭ್ಯರ್ಥಿ ದೀಪಕ ಚಿಂಚೋರೆ ಸವಾಲು ಹಾಕಿದರು.

ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು. ಚುನಾವಣೆಯ ಸೋಲಿನ ಭೀತಿಯಿಂದ ಹತಾಶರಾಗಿ ಬೆಲ್ಲದ ಅವರು ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಕುಟುಕಿದರು.

2021 ರಿಂದ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಡಿಕೆ ಹೋರಾಟ ಜನರಿಂದ ಅತಿ ಬಿರುಸಿನಿಂದ ನಡೆಯುತ್ತಿದೆ. ಇದಕ್ಕಾಗಿ ಪ್ರಜ್ಞಾವಂತರ ಹೋರಾಟ ವೇದಿಕೆ ಕೂಡ ಇದೆ. ಧಾರವಾಡದ ಮಹಾನಗರ ಪಾಲಿಕೆ




ಕಚೇರಿ ಎದುರು ವೇದಿಕೆ ಕೈಕೊಂಡ ಹೋರಾಟದಲ್ಲಿ ಭಾಗವಹಿಸಿದ ದಿನವೇ ಬೆಂಬಲ ಸೂಚಿಸಿದ್ದನೆ. ಹು-ಧಾ ಅವಳಿ ನಗರದ ಅಭಿವೃದ್ಧಿಗೆ ಬಿಡುಗಡೆ ಆಗುವ ಅನುದಾನ ಬಿಡುಗಡೆ ಸೇರಿದಂತೆ ಎಲ್ಲ ವಿಷಯಗಳಲ್ಲಿ ತಾರತಮ್ಯ ನಡೆಯುತ್ತಿರುವ ನೋವ ಧಾರವಾಡದ ನಾಗರಿಕರನ್ನು ಈಗಲೂ ಕಾಡುತ್ತಿದೆ. ಈ ಕಾರಣದಿಂದ ಪಕ್ಷಾತೀತವಾಗಿ ನಡೆಯುತ್ತಿರುವ ಹೋರಾಟದಲ್ಲಿ ಭಾಗವಹಿಸಿದ್ದೆನೆ. ಅಂದಿನಿಂದ ಇಂದಿನವರೆಗೂ ವೇದಿಕೆಯ ಹೋರಾಟದಲ್ಲಿಸಕ್ರೀಯನಾಗಿದ್ದೆನೆ.

ವಿಧಾನಸಬೆಯ ಚುನಾವಣೆ ಘೋಷಣೆ ಆಗುವ ಕೆಲವು ತಿಂಗಳುಗಳ ಮುಂಚೆಯೆ ನಾನು ಪ್ರತ್ಯೇಕ ಪಾಲಿಕೆ ಬೇಡಿಕೆ ನಮ್ಮ ಹಕ್ಕು ಎಂಬ ಹೋರ್ಡಿಂಗ್‌ಗಳನ್ನು ಮತ್ತು ಬ್ಯಾನರ್‌ಗಳನ್ನು ನಗರದಲ್ಲಿ ಪ್ರದರ್ಶಿಸಿದ್ದೆನೆ. ಅವುಗಳಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಮುಖಂಡರ ಭಾವಚಿತ್ರ ಅಥವಾ ಪಕ್ಷದ ಚಿಹ್ನೆ ಬಳಸಿಲ್ಲ. ಈ ಹೋರಾಟ ನ್ಯಾಯಸಮ್ಮತ ಎಂದು ಭಾವಿಸಿ ಬೆಂಬಲ ನೀಡಿದ್ದೇನೆ ಹೊರತು ರಾಜಕೀಯಕ್ಕೆ ಬಳಸಿಕೊಳ್ಳುವ ಉದ್ದೇಶವಿರಲ್ಲಿ. ಈ ಕಾರಣದಿಂದ ವೇದಿಕೆಗೆ ಬೆಂಬಲ ನೀಡಿದ ಕಾರಣದಿಂದ ಈ ಚುನಾವಣೆಯಲ್ಲಿ ಸ್ವಯಂ ಪ್ರೇರಣೆಯಿಂದ ನನಗೆ ವೇದಿಕೆ ಬೆಂಬಲ ನೀಡುತ್ತಿದೆ .ಆದರೆ ಬೆಲ್ಲದ ಅವರು ಈ ವಿಷಯದಲ್ಲಿ ರಾಜಕೀಯ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ ಎಂದರು.

ಒಂದು ವೇಳೆ ರಾಜಕೀಯ ಇದರಲ್ಲಿ ರಾಜಕೀಯ ಮಾಡಿದ್ದು ಸಾಬೀತುಪಡಿಸಿದರೆ ಪ್ರಸಕ್ತ ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದುವುದಾಗಿ ಚಿಂಚೋರೆ ಸವಾಲು ಎಸೆದರು.

ಇದೇ ವೇಳೆ ದೀಪಕ ಚಿಂಚೋರೆ, ಕೆಪಿಸಿಸಿ ಸದಸ್ಯ ರಾಬರ್ಟ್ ದದ್ದಾಪುರಿ, ಮುಖಂಡರಾದ ಶಾಂತಮ್ಮ ಗುಜ್ಜಳ, ಆನಂದ ಮುಶಣ್ಣವರ, ವೆಂಕಟೇಶ ಸಗಬಾಲ, ಮಹೇಶ ಹುಲ್ಲೆನ್ನವರ ಇತರರು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿದರು.

# ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳಿಗೆ ಶೀಘ್ರ ಮುಕ್ತಿ; ಕಾಂಗ್ರೆಸ್ ಗೆ ಮತ ನೀಡಿ ರಾಜ್ಯದಲ್ಲಿ ಜನತೆಯ ಸರಕಾರ ಅಧಿಕಾರಕ್ಕೆ ತನ್ನಿ: ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ಮೇ 10ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತದಿಂದ ಅಧಿಕಾರಕ್ಕೆ ಬರಲಿದ್ದು, ರಾಜ್ಯದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳಿಗೆ ಮುಕ್ತಿ ಸಿಗಲಿದೆ ಎಂದು ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.



ಬೆಳಗಾವಿಯ ಮಣ್ಣೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಬುಧವಾರ ಪ್ರಚಾರ ನಡೆಸಿ ಅವರು ಮಾತನಾಡುತ್ತಿದ್ದರು. ಕಾಂಗ್ರೆಸ್ ಘೋಷಿಸಿರುವ ಗ್ಯಾರಂಟಿ ಯೋಜನೆಗಳು ಜನರು ಪ್ರಸ್ತುತ ಎದು–ರಿಸುತ್ತಿರುವ ಸಮಸ್ಯೆಗಳಿಂದ ಮುಕ್ತಿ ನೀಡಲಿವೆ. ಜೊತೆಗೆ ಪ್ರಣಾಳಿಕೆಯಲ್ಲಿ ಸಹ ಸಾಕಷ್ಟು ಜನೋಪಯೋಗಿ ಯೋಜನೆಗಳನ್ನು ಪ್ರಕಟಿಸಲಾಗಿದೆ. ರೈತ–ರಿಗಾಗಿ, ಯುವಕರಿಗಾಗಿ, ಮಹಿಳೆಯ–ರಿಗಾಗಿ ವಿವಿಧ ಯೋಜನೆಗಳನ್ನು ಘೋಷಿಸಲಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಈ ಎಲ್ಲ ಯೋಜನೆಗಳು ಜಾರಿಯಾಗಲಿವೆ ಎಂದು ಹೆಬ್ಬಾಳಕರ್ ತಿಳಿಸಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಾದ ಗೃಹಜ್ಯೋತಿ ಯೋಜನೆ ಮೂಲಕ ಪ್ರತಿ ಮನೆಗೆ ಪ್ರತಿ ತಿಂಗಳು 200 ಯುನಿಟ್ ಉಚಿತ ವಿದ್ಯುತ್ ನೀಡಲಾಗುವುದು. ಗೃಹಲಕ್ಷ್ಮಿ ಯೋಜನೆ ಮೂಲಕ ಮನೆಯ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರದಂತೆ ವರ್ಷಕ್ಕೆ 24 ಸಾವಿರ ಪ್ರೋತ್ಸಾಹ ನೀಡಲಾಗುತ್ತದೆ. ಅನ್ನಭಾಗ್ಯ ಯೋಜನೆ ಮೂಲಕ ಬಡ ಕುಟುಂಬದ ಪ್ರತಿ ಸದಸ್ಯನಿಗೆ ಪ್ರತಿ ತಿಂಗಳು 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡಲಾಗುವುದು. ರಾಜ್ಯದ ಮಹಿಳೆಯರಿಗೆ ಸಾರ್ವಜನಿಕ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗುವುದು. ಯುವನಿಧಿ ಯೋಜನೆ ಮೂಲಕ ನಿರುದ್ಯೋಗಿ ಪದವೀಧರರಿಗೆ ಪ್ರತಿ ತಿಂಗಳು 3 ಸಾವಿರ ರೂ. ಹಾಗೂ ಡಿಪ್ಲೋಮಾ ಪದವೀಧರ–ರಿಗೆ 1500 ರೂಗಳನ್ನು 2 ವರ್ಷಗಳ ಕಾಲ ನಿರುದ್ಯೋಗ ಭತ್ಯೆ ನೀಡಲಾಗುವುದು. ರೈತರ ಹಿತ ಕಾಯಲು ಸಹ ಕಾಂಗ್ರೆಸ್ ಸರ್ಕಾರ ವಿಶೇಷ ಯೋಜನೆ ರೂಪಿಸಲಿದೆ ಎಂದು ಅವರು ವಿವರಿಸಿದರು.

ಹಿಂದೆ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗಲೆಲ್ಲ ಬಡವರಪರ ಯೋಜನೆಗಳನ್ನು ಜಾರಿಗೊಳಿಸಲಾಗಿ–ತ್ತು. ಆದರೆ ಬಿಜೆಪಿ ಸರಕಾರ ಬಂದ ಮೇಲೆ ಭ್ರಷ್ಟಾಚಾರ ಬಿಟ್ಟರೆ ಬೇರೇನೂ ಸಾಧನೆ ಮಾಡಿಲ್ಲ. ಉದ್ಯೋಗ ನೀಡುವ ಯೋಜನೆ ಇಲ್ಲ, ಮನೆ ನಿರ್ಮಾಣವಾಗಿಲ್ಲ, ಕೇವಲ ಭಾವನಾತ್ಮಕವಾಗಿ ಪ್ರಚೋದನೆ ನೀಡಿ ಅಧಿಕಾರಕ್ಕೆ ಬರಲು ಯತ್ನಿಸುತ್ತಿದೆ. ಹಾಗಾಗಿ ಮೇ 10ರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಮೂಲಕ ನಿಮ್ಮದೇ ಸರಕಾರ ಅಧಿಕಾರಕ್ಕೆ ಬರುವಂತೆ ಮಾಡಿ ಎಂದು ಹೆಬ್ಬಾಳಕರ್ ವಿನಂತಿಸಿದರು.

ಬ್ಯಾಲೆಟ್ ಯುನಿಟ್ ನಲ್ಲಿ 4ನೇ ನಂಬರ್ ನಲ್ಲಿರುವ ನನ್ನ ಹೆಸರು ಫೋಟೋ ಮುಂದೆ ಇರುವ ಬಟನ್ ಒತ್ತುವ ಮೂಲಕ ಹಸ್ತದ ಚಿಹ್ನೆಗೆ ಮತ ನೀಡಿ.

ಮುಂದಿನ 5 ವರ್ಷಗಳಲ್ಲಿ ಗ್ರಾಮೀಣ ಕ್ಷೇತ್ರದಲ್ಲಿ ನನ್ನ ಹಲವಾರು ಕನಸಿನ ಯೋಜನೆಗಳನ್ನು ಜಾರಿಗೊಳಿಸುತ್ತೇನೆ. ನಿಮ್ಮ ನಿರೀಕ್ಷೆಗಳನ್ನು ಎಂದಿಗೂ ಹುಸಿಗೊಳಿಸುವುದಿಲ್ಲ ಎಂದು ಹೆಬ್ಬಾಳಕರ್ ಭರವಸೆ ನೀಡಿದರು.

# ಮನೆ–ಮನೆಗೆ ಹೋಗಿ ಪ್ರಚಾರ

ಬೆಳಗಾವಿ: ವಡಗಾವಿಯ ದತ್ತಾತ್ರೇಯ ಗಲ್ಲಿ, ಸಪ್ಪಾರ ಗಲ್ಲಿ ಪ್ರದೇಶಗಳಲ್ಲಿ ಬುಧವಾರ ಮನೆ–ಮನೆಗೆ ಹೋಗಿ ಪ್ರಚಾರ ಮಾಡಿದೆ. ಜನರು ಗೌರವಯುತವಾಗಿ ಬರಮಾಡಿ ಕೊಂಡು, ಈ ಚುನಾವಣೆಯಲ್ಲಿ ಬಹುಮತಗಳಿಂದ ಚುನಾಯಿಸಿ ತರುವ ಭರವಸೆ ನೀಡಿದರು.



ದತ್ತಾತ್ರೇಯ ಗಲ್ಲಿ ಹಾಗೂ ಸಪ್ಪಾರ ಬೀದಿಗಳಲ್ಲಿ ರಸ್ತೆಗಳು ಹಾಳಾಗಿ, ಮನೆಗಳೆಲ್ಲ ಧೂಳಿನಿಂದ ಆವ–ರಿಸುತ್ತಿವೆ. ಮೇಲಾಗಿ ನೀರಿನ ಸಮಸ್ಯೆಯನ್ನೂ ಸಹ ಸ್ಥಳೀಯರು ತಿಳಿಸಿದರು. ಯುವಕರು, ಮಹಿಳೆಯರು ಉದ್ಯೋಗದ ನಿರೀಕ್ಷೆಯಲ್ಲಿದ್ದಾರೆ. ಅವರೆಲ್ಲರ ಆಸೆಗಳಿಗೆ ಕಾಂಗ್ರೆಸ್ ಸರ್ಕಾರವು ಸಹಾಯ ಮಾಡಲಿದೆ ಎಂದು ಹೇಳಿದೆ. ಕಾಂಗ್ರೆಸ್ ಪಕ್ಷವು ಘೋಷಿಸಿರುವ 5 ಗ್ಯಾರಂಟಿಗಳ ಬಗ್ಗೆ ಕೂಡ ವಿವ–ರಿಸಿದೆ. ಜನರು ಈ ಪಂಚ ಯೋಜನೆಗಳ ಲಾಭ ಪಡೆಯಲು ಆಸಕ್ತಿ ತೋರುತ್ತಿದ್ದಾರೆ.

ವಿಶೇವಾಗಿ ನೇಕಾರರು ಅನುಭವಿಸುತ್ತಿರುವ ಕಷ್ಟಗಳಿಗೆ ನಾನು ಶಾಸಕಿಯಾದರೆ ಪರಿಹಾರ ನೀಡುವ ಭರವಸೆ ನೀಡಿದ್ದು, ಅದನ್ನು ಜನರು ಮುಕ್ತಕಂಠದಿಂದ ಹೊಗಳುತ್ತಿದ್ದಾರೆ. ಏನೇ ಆಗಲಿ ಈ ಬಾರಿ ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಈ ಬಾರಿ ಹೆಣ್ಣುಮಗಳು ಗೆದ್ದು ಬರಲಿ ಎಂದು ಹಾರೈಕೆಯ ಮಾತುಗಳನ್ನಾಡುತ್ತಿದ್ದಾರೆ.

ಜನರಿಂದ ಸಿಗುತ್ತಿರುವ ಪ್ರೀತಿ, ಬೆಂಬಲಕ್ಕೆ ಅವರಿಗೆ ಎಷ್ಟು ಧನ್ಯವಾದಗಳನ್ನು ತಿಳಿಸಿದರೂ ಸಾಲದು.

# ವಿವಿಧ ಸ್ಥಳಗಳಲ್ಲಿ ಬಿಜೆಪಿ ಪರ ಚುನಾವಣೆ ಪ್ರಚಾರ



ಬೆಳಗಾವಿ: 2023 ರ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ರಾಯಬಾಗ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀ ದುರ್ಯೋಧನ ಐಹೊಳೆ ಅವರ ಪರವಾಗಿ ಕೆಎಲ್ಇ ಸಂಸ್ಥೆಯ ಕಾರ್ಯಾರ್ಧ್ಯಕ್ಷರು ಹಾಗೂ ಮಾಜಿ ಸಂಸದರಾದ ಡಾ.ಪ್ರಭಾಕರ ಕೋರೆ ಪ್ರಚಾರ ನಡೆಸಿದರು.

ರಾಯಬಾಗ ತಾಲ್ಲೂಕಿನ ನಂದಿಕುರಳಿ, ಯಡ್ರಾವ, ಮೇಕಹಳ್ಳಿ, ಕೆಂಪಟ್ಟಿ, ನಸಲಾಪುರ, ಬಾವನ ಸೌಂದತ್ತಿ, ಹಳೇ ದಿಗ್ಗೇವಾಡಿ, ಬಿರಡಿ, ಮಾಯಕ್ಕ ಚಿಂಚಲಿ ಮುಂತಾದ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ ಅವರು ಬಿಜೆಪಿಗೆ ಮತ ನೀಡಲು ಜನತೆಗೆ ಕೇಳಿಕೊಂಡರು.

ಈ ಸಂದರ್ಭಗಳಲ್ಲಿ ರಾಯಬಾಗ ಮತಕ್ಷೇತ್ರದ ಎಂಎಲ್ಎ ಅವರಾದ ದುರ್ಯೋಧನ ಐಹೊಳೆ, ಬಿಹಾರದ ಶಾಸಕರಾದಂತ ಮಾನ್ಯ ಶ್ರೀ ಸಂಜಯ್ ಚೌರಾಸಿಯಾ ಚಿದಾನಂದ ಬಸವಪ್ರಭು ಕೋರೆ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷರಾದ ಭರತೇಶ ಬನವನೆ, ಶ್ರೀ ಚೌಗೊಂಡ ಪಾಟೀಲ್ ಹಾಗೂ ತಾಲೂಕು ಪಂಚಾಯಿತಿ ಸದಸ್ಯ ಶ್ರೀ ತುಕಾರಾಮ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

# ಘಟಪ್ರಭಾದಲ್ಲಿ ಕಾಂಗ್ರೆಸ್ ಬೃಹತ್ ರ್ಯಾಲಿ

ಘಟಪ್ರಭಾ– ನಗರದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಅಶೋಕ ಪೂಜೇರಿ ಹಾಗೂ ಕಾಂಗ್ರೇಸ್ ನಗರದ ಅಧಿಕೃತ ಅಭ್ಯರ್ಥಿ ಡಾ.ಮಹಾಂತೇಶ ಕಡಾಡಿಯವರು ರೊಡ್ ಶೋ ನಡಿಸಿದರು.



ನಗರದ ಕಾಳಮ್ಮ ದೇವಿ ದೇವಾಲಯದಿಂದ ಮೃತ್ಯುಂಜಯ ವೃತ್ತದ ವರೆಗೆ ಸಾಕಷ್ಟು ಜನ ಸಮೂಹದೊಂದಿಗೆ ವೃತ್ತದವರೆಗೆ ಸೇರಿದರು, ಘಟಪ್ರಭಾದ ಮೃತ್ಯುಂಜಯ ವೃತ್ತದಲ್ಲಿ ಮಾತನಾಡಿದ ಡಾ.ಕಡಾಡಿಯವರು ಯಾಕೆ ಕಾಂಗ್ರೆಸ್ ಪಕ್ಷಕ್ಕೆ ನತ ಹಾಕಬೇಕು ಅಂತ ವಿವರಣೆ ನೀಡಿದರು ಹಾಗೂ ವಕೀಲರಾದ ಮಲ್ಲಿಕಾರ್ಜುನ ಚೌಕಾಶಿ ಹಾಗೂ ಗಂಗಾಧರ ಬಡಕುಂದ್ರಿಯವರು ಗೋಕಾಕ ಜನರಿಗೆ ಏನು ಬದಲಾವಣೆ ಬೇಕು ಎಬ್ಬುವುದು ಹೇಳಿದರು.

ಘಟಪ್ರಭಾದ ಮೃತ್ಯುಂಜಯ ಸರ್ಕಲ್ ನಲ್ಲಿ ಗೋಕಾಕ ಅಭಿವೃದ್ಧಿ ವಂಚಿತವಾಗಿದೆ, ಇಲ್ಲಿನ ಶಾಸಕರು ಯಾವ ಸೌಲಭವನ್ನು ಒದಗಿಸಿಲ್ಲ, ಕೇವಲ ದಬ್ಬಾಳಿಕೆ ಮಾಡಿಕೊಂಡು ಬಂದಿದ್ದಾರೆ,.

ಸಾವಿರಾರು ಕೋಟಿ ಅನುದಾನ ತಂದಿದ್ದಾನೆ ಎಂದು ಹೇಳುವ ಶಾಸಕರು ಆ ಹಣ ಎಲ್ಲಿಗರ ಹೋಗಿಎ ಎಂವುದನ್ನು ಹೇಳಬೇಕು ಹಾಗೂ ಮುಂದಿನ ದಿನದಲ್ಲಿ ತನಿಖೆ ನಡಿಸಬೇಕು ಎಂದು ಡಾ.ಮಹಾಂತೇಶ ಕಡಾಡಿಯವರು ಹೇಳಿದರು.

ಈ ಸಂಧರ್ಬದಲ್ಲಿ ಕಾಂಗ್ರೆಸ್ ಮುಖಂಡರಾದ ಅಶೋಕ ಪೂಜೇರಿ, ವಕೀಲರಾದ ಮಲ್ಲಿಕಾರ್ಜುನ ಚೌಕಾಶಿ, ಗಂಗಾಧರ ಬಡಕುಂದ್ರಿ, ಲಖನ್ ಸವಸುದ್ದಿ, ಪುಟ್ಟುಅಣ್ಣಾ ಖಾನಾಪುರೆ, ವಿವೇಕ್ ಕುದರಿಮಠ, ಶ್ರೀಧರ ಹಳ್ಳೂರ ಹಾಗೂ ಇತರರು ಉಪಸ್ಥಿತರಿದ್ದರು.



ಹಿಂದುತ್ವದ ವಿಷಯ ಬಂದಾಗ ಬೆಳಗಾವಿಯ ಮಧ್ಯ ಭಾಗದಲ್ಲಿ ತಲೆಯೆತ್ತಿ ನಿಂತು ಸಮರ್ಥನೆ ನೀಡಿ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿ ಪರವಾಗಿ ಜೈಕಾರ ಹಾಕುವವರು ನಮ್ಮ ಛತ್ರಪತಿ ಶಿವಾಜಿ ಮಹಾರಾಜರ ಅನುಯಾಯಿಗಳು. ಶಿವಾಜಿ ನಗರದ ಹೃದಯ ಭಾಗದಲ್ಲಿ ಇಂದು ಪ್ರಚಾರಾರ್ಥ ತೆರಳಿದ ಬಿಜೆಪಿ ಅಭ್ಯರ್ಥಿ ರವಿ ಪಾಟೀಲರ ಪರವಾಗಿ ಸೇರಿದ ಜನ, ಅವರ ಪ್ರೀತಿ–ಅಭಿಮಾನ ನಮ್ಮ ಅಭ್ಯರ್ಥಿಯ ಗೆಲುವಿನ ಆತ್ಮ ವಿಶ್ವಾಸವನ್ನು ಹೆಚ್ಚಿಸಿ ವಿಜಯ ಮಾಲೆ ಹಾಕಿಸುವ ಕಡೆಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಬನ್ನಿ ಪ್ರಜಾಪ್ರಭುತ್ವದ ವಿಷಯದಲ್ಲಿ ಅತೀ ಹೆಚ್ಚು ಮತದಾನ ಮಾಡಿ ದಿಗ್ವಿ–ಜಯ ಸಾಧಿಸೋಣ. ಬಿಜೆಪಿಯನ್ನು ಗೆಲ್ಲಿಸೋಣ.

# ಡಿಆರ್ಎಚ್ಪಿ ಸಲ್ಲಿಸಿದಫಿನ್ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಹುಬ್ಬಳ್ಳಿ: ಫಿನ್ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್'("ದಿ ಬ್ಯಾಂಕ್") "ಡಿಜಿಟಲ್–ಪ್ರಥ–'ಮ" ಸ್ಮಾಲ್ ಫಿನಾನ್ಸ್ ಬ್ಯಾಂಕ್ (ಎಸ್ಎಫ್ಬಿ) ಆಗಿದ್ದು, ವಿಶೇಷವಾಗಿ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಬ್ಯಾಂಕಿಂಗ್ ರಹಿತ ಮತ್ತು ಕಡಿಮೆ ಬ್ಯಾಂಕಿಂಗ್ ಪ್ರವೇಶಹೊಂದಿರುವಗ್ರಾಹಕ ವಿಭಾಗಗಳ ಮೇಲೆ ಗಮನಕೇಂದ್ರೀಕರಿಸಿದೆ. ಮಾರುಕಟ್ಟೆ ನಿಯಂತ್ರಕ ಸೆಕ್ಯುರಿಟಿ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ'ಗೆ (ಸೆಬಿ) ಈ ಬ್ಯಾಂಕ್ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್' ಅನ್ನು ಸಲ್ಲಿಸಿದೆ.

ತಲಾ ರೂ 10 ಮುಖಬೆಲೆಯ ಈಕ್ವಿಟಿಷೇರು ಬಂಡವಾಳದ ವಿತರಣೆಯೊಂದಿಗೆ ಆರಂಭಿಕ ಸಾರ್ವಜನಿಕ ವಿತರಣೆ'(ಐಪಿಓ) ಮೂಲಕ ಮೂಲಕ ಹಣವನ್ನು ಸಂಗ್ರಹಿಸಲು ಬ್ಯಾಂಕ್ ಯೋಜಿಸಿದೆ. ಇದರಲ್ಲಿ ರೂ 625 ಕೋಟಿಯವರೆಗಿನ ಹೊಸ ವಿತರಣೆ("ಫ್ರೆಶ್ ಇಶ್ಯೂ") ಮತ್ತು ಪ್ರವರ್ತಕ ಮತ್ತು ಹೂಡಿಕೆದಾರರ ಷೇರುದಾರರಿಂದ ಒಟ್ಟು 17,000,000 ಈಕ್ವಿಟಿ ಷೇರುಗಳ ಮಾರಾಟ ಪ್ರಸ್ತಾಪ ("ಆಫರ್ ಫಾರ್ ಸೇಲ್") ಸೇರಿದೆ.

ಹೊಸ ವಿತರಣೆಯ ನಿವ್ವಳ ಆದಾಯವನ್ನು ಬ್ಯಾಂಕಿನ ಭವಿಷ್ಯದ ಬಂಡವಾಳ ಅಗತ್ಯತೆಗಳನ್ನು ಪೂರೈಸಲು ಬ್ಯಾಂಕಿನ ಶ್ರೇಣಿ –1 ಬಂಡವಾಳ ನೆಲೆಯನ್ನು ಹೆಚ್ಚಳಕ್ಕಾಗಿ ಬಳಸಲು ಬ್ಯಾಂಕ್ ಪ್ರಸ್ತಾಪಿಸಿದೆ.

ಈಕ್ವಿಟಿ ಷೇರುಗಳ ಕೊಡುಗೆಯಲ್ಲಿ ಫಿನ್ಕೇರ್ ಬಿಸಿನೆಸ್ ಸರ್ವೀಸಸ್ ಲಿಮಿಟೆಡ್'ನಿಂದ ("ಷೇರುಮಾರಾಟ ಮಾಡುತ್ತಿರುವ ಪ್ರವರ್ತಕ ") 14,934,779 ಈಕ್ವಿಟಿ ಷೇರುಗಳು ಮತ್ತು ವ್ಯಾಗ್ನರ್ ಲಿಮಿಟೆಡ್'ನ 471,754 ವರೆಗೂಈಕ್ವಿಟಿ ಷೇರುಗಳು, ಟ್ರೂ ನಾರ್ತ್ ಫಂಡ್ ವಿಎಲ್ಪಿ'ಯಿಂದ 444,140 ವರೆಗೂ ಈಕ್ವಿಟಿ ಷೇರುಗಳು, 'ಇಂಡಿಯಂ IV'(ಮಾರಿಷಸ್) ಹೋಲ್ಡಿಂಗ್ಸ್ ಲಿಮಿಟೆಡ್' ನಿಂದ430,842 ವರೆಗೂಈಕ್ವಿಟಿ ಷೇರುಗಳು. ಒಮೇಗಾಟಿ. ಸಿಹೋಲ್ಡಿಂಗ್ಸ್ ಪಿ.ಟಿ.ಇ. ಲಿಮಿಟೆಡ್'ನಿಂದ 130,787 ವರೆಗೆ ಈಕ್ವಿಟಿ ಷೇರುಗಳು, ಲೀಪ್ಫ್ರಾಗ್ ರೂರಲ್ ಇನ್ಕ್ಲೂಷನ್ (ಇಂಡಿಯಾ) ಲಿಮಿಟೆಡ್' ನಿಂದ 130,787 ವರೆಗೆಈಕ್ವಿಟಿ ಷೇರುಗಳು, ಕೊಟಕ್ ಮಹೀಂದ್ರಾ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್'ನಿಂದ 126,151 ವರೆಗೆ ಈ ಕ್ವಿಟಿ ಷೇರುಗಳು; ಎಡೆಲ್ವೀಸ್ ಟೋಕಿಯೊ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್'ನಿಂದ 1,16,981 ವರೆಗೆ ಈಕ್ವಿಟಿ ಷೇರುಗಳು; ಭಾರ್ತಿ ಆಕ್ಸಾ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್' ನಿಂದ 45,710 ವರೆಗೆಈಕ್ವಿಟಿ ಷೇರುಗಳು,?ಸಿಲ್ವರ್ ಲೀಫ್ ಓಕ್ (ಮಾರಿಷಸ್) ಲಿಮಿಟೆಡ್'ನಿಂದ 35,092 ವರೆಗೆಈಕ್ವಿಟಿ ಷೇರುಗಳು; ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್' ನಿಂದ 20,572 ವರೆಗೆಈಕ್ವಿಟಿ ಷೇರುಗಳು ಮತ್ತು ?ಜುನೊ ಜನರಲ್ ಇನ್ಶೂರೆನ್ಸ್ ಲಿಮಿಟೆಡ್'ನಿಂದ 19,237 ವರೆಗೆಈಕ್ವಿಟಿ ಷೇರುಗಳುಸೇರಿವೆ ("ಷೇರುದಾರರನ್ನು ಮಾರಾಟ ಮಾಡುತ್ತಿರುವ ಹೂಡಿಕೆದಾರರು") ("ಸಾಮೂಹಿಕವಾಗಿ ಮಾರಾಟ ಮಾಡುತ್ತಿರುವ ಷೇರುದಾರರು"). ಐಸಿಐಸಿಐ ಸೆಕ್ಯುರಿಟೀಸ್ ಲಿಮಿಟೆಡ್', ಆಕ್ಸಿಸ್ ಕ್ಯಾಪಿಟಲ್ ಲಿಮಿಟೆಡ್', ಐಐಎಫ್ಎಲ್ ಸೆಕ್ಯುರಿಟೀಸ್ ಲಿಮಿಟೆಡ್', ಎಸ್ಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಲಿಮಿಟೆಡ್' ಮತ್ತು ಆಂಬಿಟ್ ಪ್ರೈವೇಟ್ ಲಿಮಿಟೆಡ್'ಬುಕ್ ರನ್ನಿಂಗ್ ಲೀಡ್ ಮ್ಯಾನೇಜರ್ ಸಂಸ್ಥೆಗಳಾಗಿವೆ.

## ಬಿಜೆಪಿ, ಕಾಂಗ್ರೆಸ್ ಜನರ ಹಣ ತಿಂದು ಅದೇ ಹಣದಲ್ಲಿ ಚುನಾವಣೆಯಲ್ಲಿ ಹಂಚಲು ಮುಂದಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮೀ ಅಕ್ರೋಶ



ರಾಯಬಾಗ: ಬಿಜೆಪಿ ಹಾಗೂ ಕಾಂಗ್ರೆಸ್ ನವರು ಜನರ ಹಣ ತಿಂದು ಅದೇ ಹಣದಲ್ಲಿ ಚುನಾವಣೆಯಲ್ಲಿ ಹಂಚಲು ಮುಂದಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮೀ ಅಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಯಬಾಗ ಪಟ್ಟಣದಲ್ಲಿ ರಾಯಬಾಗ, ಕುಡಚಿ ವಿಧಾನಸಭಾ ಕ್ಷೇತ್ರದ ಜೆಡಿ–ಎಸ್ ಪಕ್ಷದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷವಾದರೂ ಜನರ ಬಡತನ ಹೋಗಲಾಡಿಸಲು ಆಗಿಲ್ಲ. ಹಣ ನೀಡಿ ಚುನಾವಣೆ ಮಾತ್ರ ಮಾಡುತ್ತಿದ್ದಾರೆ. ಇದಕ್ಕೆಲ್ಲ ಬ್ರೇಕ್ ಹಾಕಲು ನಾನು ಬಂದಿದ್ದೇನೆ. ಜನರು ನಿರಾಳವಾಗಿ ಜೀವನ ಸಾಗಿಸುವ ಸಲುವಾಗಿ ಕಾರ್ಯ ಮಾಡುತ್ತೇನೆ ಎಂದರು.

ಬಿಜೆಪಿ ಸರ್ಕಾರದಲ್ಲಿ ರಸಗೊಬ್ಬರ ತುಟ್ಟಿಯಾಗಿದೆ. ಅದನ್ನು ಸರಿಪಡಿಸಿ ಕಡಿಮೆ ಮಾಡಲಾಗುವುದು. ಭೂಮಿ ಇಲ್ಲದವರಿಗೆ ಕೃಷಿ ಕಾರ್ಮಿಕ–ರಿಗೆ 2000 ನೀಡುವುದು, ಹೊಸ ಬಡಾವಣೆಗಳಿಗೆ ಪುನರ್ವಸತಿ ಕೊಟ್ಟು, ಯಾ–ರಿಗೆ ಮನೆ ಇಲ್ಲ ಅವರಿಗೆ 5 ಲಕ್ಷ ರೂಪಾಯಿ ವೆಚ್ಚದಲ್ಲಿ ಮನೆ ಮಂಜೂರು ಮಾಡಲಾಗುವುದು, ವೃದ್ಧಾಪರಿಗೆ, ವಿಧವೆಯರಿಗೆ ಹೆಚ್ಚಿನ ಮಾಸಿಕ ಹೆಚ್ಚಿನ ಹಣ ನೀಡಲಾಗುವುದು. ಆರೋಗ್ಯ ಸಮಸ್ಯೆ ಬಂದರೆ 40 –50 ಲಕ್ಷ ರೂಪಾಯಿ ಖರ್ಚು ಬಂದರೂ ಸರ್ಕಾರ ಕಟ್ಟುತ್ತದೆ. ಹೀಗೆ ಹತ್ತು ಹಲವು ಯೋಜನೆಗಳು ಜಾರಿಗೆ ತರಲಾಗುವುದು ಎಂದರು.

ಇನ್ನೂ ರಾಯಬಾಗ ವಿಧಾನಸಭಾ ಕ್ಷೇತ್ರದ ಹನುಮಾನ ಕರಗಾಂವ, ಬೆಂಡವಾಡ ಯೋಜನೆ ಮಂಜೂರು ಮಾಡಲಾಗುವುದು, ಪ್ರತಿಯೊಂದು ಗ್ರಾಮಗಳಿಗೆ ಹೈಟೆಕ್ ಸರ್ಕಾರಿ ಆಸ್ಪತ್ರೆ ಮಂಜೂರು ಮಾಡಲಾಗುವುದು. ಯಾವುದೇ ಸಮಸ್ಯೆಗಳನ್ನು ಉಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಚುನಾವಣೆಯಲ್ಲಿ ರಾಯಬಾಗ, ಕುಡಚಿ ಕ್ಷೇತ್ರ ಗೆಲುವು ಸಾಧಿಸಿದರೆ ದತ್ತು ತೆಗೆದುಕೊಳ್ಳುತ್ತೇನೆ ಎಂದರು.

# ಮಂಗಲಾ ಅಂಗಡಿ, ಕಡಾಡಿ, ಕವಟಗಿಮಠ ಸೇರಿ ನಾಲ್ವರ ಮೇಲೆ ಪ್ರಕರಣ ದಾಖಲು

ಖಾನಾಪುರ: ಸ 'ಂಸದೆ ಮಂಗಲಾ ಅಂಗಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ವಿಧಾನ ಪರಿಷತ್ ಮಾಜಿ ಸಚೇತಕ ಮಹಾಂತೇಶ ಕವಟಗಿಮಠ ಮತ್ತು ಮಲಪ್ರಭಾ ಶುಗರ್ಸ್ ಮಾಜಿ ಅಧ್ಯಕ್ಷ ಮೋಹನ ಸಂಬರಗಿ ವಿರುದ್ಧ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ



ಪ್ರಕರಣ ದಾಖಲಾಗಿದೆ.

ಈ ಕುರಿತು ಕುರಿತು ನಂದಗಡ ಠಾಣೆಯಲ್ಲಿ ಬುಧವಾರ ಎಫ್ಐಆರ್ ದಾಖಲಿಸಲಾದೆ.

ಇವರೆಲ್ಲರೂ ಮಂಗಳವಾರ ರಾತ್ರಿ ಖಾನಾಪುರ ತಾಲೂಕಿನ ಹಿರೇಮುನವಳ್ಳಿ ಗ್ರಾಮದಲ್ಲಿ ಲಿಂಗಾಯತ ಸಮಾಜದ 500 ಕ್ಕೂ ಹೆಚ್ಚು ಮುಖಂಡರನ್ನು ಸೇರಿಸಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಕೈಗೊಂಡಿದ್ದರು.

ಆದರೆ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು.

ಇದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿರುವ ಕಾರಣ ಚುನಾವಣೆಯ ನೀತಿ ಸಂಹಿತೆ ಪಾಲನೆಯ ಅಧಿಕಾರಿ ರಾಜೇಂದ್ರ ಅವರು ದೂರು ದಾಖಲಿಸಿದ್ದಾರೆ.

# ಮಂಗಲಾ ಅಂಗಡಿ, ಕಡಾಡಿ, ಕವಟಗಿಮಠ ಸೇರಿ ನಾಲ್ವರ ಮೇಲೆ ಪ್ರಕರಣ ದಾಖಲು

ಖಾನಾಪುರ: ಸ 'ಂಸದೆ ಮಂಗಲಾ ಅಂಗಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ವಿಧಾನ ಪರಿಷತ್ ಮಾಜಿ ಸಚೇತಕ ಮಹಾಂತೇಶ ಕವಟಗಿಮಠ ಮತ್ತು ಮಲಪ್ರಭಾ ಶುಗರ್ಸ್ ಮಾಜಿ ಅಧ್ಯಕ್ಷ ಮೋಹನ ಸಂಬರಗಿ ವಿರುದ್ಧ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಾಗಿದೆ.



ಈ ಕುರಿತು ಕುರಿತು ನಂದಗಡ ಠಾಣೆಯಲ್ಲಿ ಬುಧವಾರ ಎಫ್ಐಆರ್ ದಾಖಲಿಸಲಾದೆ.

ಇವರೆಲ್ಲರೂ ಮಂಗಳವಾರ ರಾತ್ರಿ ಖಾನಾಪುರ ತಾಲೂಕಿನ ಹಿರೇಮುನವಳ್ಳಿ ಗ್ರಾಮದಲ್ಲಿ ಲಿಂಗಾಯತ ಸಮಾಜದ 500 ಕ್ಕೂ ಹೆಚ್ಚು ಮುಖಂಡರನ್ನು ಸೇರಿಸಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಕೈಗೊಂಡಿದ್ದರು.

ಆದರೆ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು.

ಇದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿರುವ ಕಾರಣ ಚುನಾವಣೆಯ ನೀತಿ ಸಂಹಿತೆ ಪಾಲನೆಯ ಅಧಿಕಾರಿ ರಾಜೇಂದ್ರ ಅವರು ದೂರು ದಾಖಲಿಸಿದ್ದಾರೆ.

# ನಾಡಿನ ಜನರು ಬಹುಮತದಿಂದ ಗೆಲ್ಲಿಸುವ ವಿಶ್ವಾಸವಿದೆ: ಡಾ.ವಿಶ್ವನಾಥ ಪಾಟೀಲ

ಬೈಲಹೊಂಗಲ : ನನ್ನ ಅಧಿಕಾರವಧಿಯಲ್ಲಿ ನೆನೆಗುದ್ದಿಗೆ ಬಿದ್ದಿದ್ದ ದೊಡ್ಡ, ದೊಡ್ಡ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ. ಇನ್ನೂ ಬೈಲಹೊಂಗಲ ನಾಡು ಸಂಪೂರ್ಣ ಅಭಿವೃದ್ಧಿ ಆಗಬೇಕಿದೆ. ಈ ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ನನಗೆ ನಾಡಿನ ಜನರು ಆಶೀರ್ವಾದಿಸಿ ಬಹುಮತದಿಂದ ಗೆಲ್ಲಿಸುವ ವಿಶ್ವಾಸ ಇದೆ ಡಾ.ವಿಶ್ವನಾಥ ಪಾಟೀಲ ಹೇಳಿದರು.

ಮತಕ್ಷೇತ್ರದ ಚಚಡಿ ಗ್ರಾಮದಲ್ಲಿ ಅಪಾರ ಬೆಂಬಲಿಗರೊಂದಿಗೆ ಚುನಾವಣಾ ಪ್ರಚಾರ ನಡೆಸಿ ಅವರು ಮಾತನಾಡಿದರು. ನನ್ನ ಅಧಿಕಾರವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ನಾನೇ ಮಾಡಿದ್ದೇನೆಂದು ಹೇಳಿಕೊಳ್ಳುತ್ತಿರುವುದು ಶೋಭೆ ತರುವಂತದಲ್ಲ. ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಹಿರೇಬಾಗೇವಾಡಿಯಿಂದ ಸವದತ್ತಿವರೆಗೆ ರಾಜ್ಯ ಹೆದ್ದಾರಿ ರಸ್ತೆ, ಒಳ ಚರಂಡಿ ಯೋಜನೆ, ಕುಡಿಯುವ ನೀರಿನ ಯೋಜನೆ, ಏತ ನೀರಾವರಿ ಯೋಜನೆ, ಬಾಂಧಾರ ನಿರ್ಮಾಣ, ರೈತರ ಹೊಲಗಳಿಗೆ ರಸ್ತೆಗಳು ಸೇರಿದಂತೆ 1000 ಕ್ಕೂ ಹೆಚ್ಚು ಕೋಟಿ ರೂ.ಗಳ ಅಭಿವೃದ್ಧಿ ಮಾಡಿದ್ದೇನೆ. ಇವೆಲ್ಲ ನನ್ನ ಅಧಿಕಾರವಧಿಯಲ್ಲಿ ಆಗಿವೆ ಎಂದು ಹೆಮ್ಮೆಯಿಂದ ಹೇಳುವೆ.

ನಾಡಿನ ಜನರೇ ನನ್ನ ಹೈಕಮಾಂಡ ಆಗಿದ್ದಾರೆ. ಅವರ ನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ. ಒಳ್ಳೆಯದನ್ನು ಗುರುತಿಸುವ, ಗೌರವಿಸುವ ನಾಡು ನನ್ನದ್ದು, ಸ್ವಾಭಿಮಾನಕ್ಕೆ ಪೆಟ್ಟು ಬಂದಾಗ ಒಗ್ಗಟ್ಟಾಗಿ ನಿಂತು ಹೋರಾಟ ಮಾಡುವ ಶಕ್ತಿ ನಾಡಿನ ಜನರದ್ದಾಗಿದೆ. ನನಗೆ ಮೋಸದ ರಾಜಕಾರಣ ಗೊತ್ತಿಲ್ಲ. ನಾನೊಬ್ಬ ಸೇವಕನಾಗಿ ಜನರ ಜೊತೆ ಇರುವ ವ್ಯಕ್ತಿ. ನಾನು 24*7 ಜನರ ಸೇವೆಯಲ್ಲಿ ಇರುವ ಸೇವಕ. ಯಾವತ್ತೂ ಅಧಿಕಾರ ಅನುಭವಿಸಿದ ವ್ಯಕ್ತಿಯಲ್ಲ.



ಎಲ್ಲರನ್ನೂ ಸರಿ ಸಮಾನವಾಗಿ ಕಾಣುತ್ತೇನೆ. ಬೈಲಹೊಂಗಲ ಮತಕ್ಷೇತ್ರದ 182 ಹಳ್ಳಿಗಳ ಜನತೆ ಪ್ರೀತಿಯಿಂದ ಆಶೀರ್ವಾದ ಮಾಡುತ್ತಿದ್ದಾರೆ. ಬಿಜೆಪಿ, ಕಾಂಗ್ರೆಸ್ ಆಡಳಿತದಿಂದ ಜನರು ರೋಸಿ ಹೋಗಿದ್ದಾರೆ. ನಿಜವಾದ ಬಡವರಿಗೆ ಯೋಜನೆಗಳು ದೊರಕದೆ ಇರುವುದು ದುರ್ದೈವದ ಸಂಗತಿ. ನನ್ನನ್ನು ಬಹುಮತದಿಂದ ಗೆಲ್ಲಿಸಿ ತಂದರೆ ಒಳ್ಳೆಯ ಆಡಳಿತ ನೀಡಿ ಮಾದರಿಯಾಗುವೆ.

ಬೈಲಹೊಂಗಲ ನಾಡನ್ನು ಮಾದರಿ ತಾಲಕನ್ನಾಗಿ ಮಾಡಲು ಶ್ರಮಿಸುವೆ. ಪುರಸಭೆಯನ್ನು ನಗರಸಭೆಯನ್ನಾಗಿ ಮಾಡಿ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಪಥದಲ್ಲಿ ಕೊಂಡಯ್ಯುವೆ ಎಂದರು. ರೈತರಿಗೆ, ಶ್ರಮಿಕ–ರಿಗೆ, ಕೂಲಿ ಕಾರ್ಮಿಕರಿಗೆ, ವ್ಯಾಪಾರಸ್ಥರಿಗೆ, ಮಹಿಳೆಯರಿಗೆ, ಹಿರಿಯರಿಗೆ, ಯುವಕರಿಗೆ ಒಳ್ಳೆಯ ಮಾದರಿ ಆಡಳಿತ ನೀಡುವ ಉದ್ದೇಶ ಹೊಂದಿದ್ದೇನೆ.

ರಾಜು ಕುಡಸೋಮಣ್ಣವರ, ಮಡಿವಾಳಪ್ಪ ಹೋಟಿ ಮಾತನಾಡಿ, ಸದಾ ಜನರಿಗಾಗಿ ಮಿಡಿಯುವ ಹೃದಯವಂತಿಕೆ ನಾಯಕ ಡಾ.ವಿಶ್ವನಾಥ ಪಾಟೀಲರು. ಕಷ್ಟ ಅಂದವರಿಗೆ ಕರುಣೆ ತೋರುವ ಅವರು ಎಲ್ಲರೂ ಅಚ್ಚು ಮೆಚ್ಚಿನ ನಾಯಕರಾಗಿದ್ದಾರೆ.

ಎಲ್ಲರೊಡನೆ ಪ್ರೀತಿಯಿಂದ ಬೆರೆತು ಸಹಾಯ–ಸಹಕಾರ ಮಾಡುವ ಅವರೊಬ್ಬ ನಿಜವಾದ ಜನ ಸೇವಕರಾಗಿದ್ದಾರೆ. ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಅವರು ರೈತ ಚಿಹ್ನೆಗೆ ಮತ ನೀಡಿ ಬಹುಮತದಿಂದ ಗೆಲ್ಲಿಸಬೇಕೆಂದರು. ಇಂತಹ ನಾಯಕ ಸಿಗುವುದು ಅಪರೂಪ. ನಾಡಿನ ಜನರು ತಮ್ಮ ಅಮೂಲ್ಯ ಮತವನ್ನು ರೈತ ಚಿಹ್ನೆಗೆ ನೀಡಬೇಕು. ಮತ್ತೊಮ್ಮೆ ವಿಶ್ವನಾಥ ಪಾಟೀಲ ಅವರನ್ನು ಗೆಲ್ಲಿಸಲು ಪಣತೊಡಬೇಕೆಂದರು.

> ನಾನು ಪ್ರಾಮಾಣಿಕವಾಗಿ ಜನಸೇವೆ ಮಾಡುವೆ. ಯಾರಿಗೂ ಬೇಧ–ಭಾವ ಮಾಡದೇ ಎಲ್ಲರಿಗೂ ಸಹಾಯ–ಸಹಕಾರ ಮಾಡಿದ್ದೇನೆ. ಬೈಲಹೊಂಗಲ ಸಂಪೂರ್ಣ ಅಭಿವೃದ್ಧಿ ಆಗಬೇಕು. ಮಾದರಿ ತಾಲೂಕು ಆಗಬೇಕು. ಒಳ್ಳೆಯ ಆಸ್ಪತ್ರೆ, ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವೆ. ನಿರುದ್ಯೋಗ ಯುವಕ–ಯುವತಿಯರಿಗೆ ಉದ್ಯೋಗ ಇಲ್ಲದೇ ಪರದಾಡುತ್ತಿದ್ದಾರೆ ನಾಡಿಗೆ ದೊಡ್ಡ ಕಂಪನಿಗಳನ್ನು ತರುವ ಕನಸು ಇದೆ. ಎಲ್ಲರೂ ಈ ಬಾರಿ ಅವಕಾಶ ಮಾಡಿಕೊಡಬೇಕು. ಬಹುಮತದಿಂದ ಗೆಲ್ಲಿಸಬೇಕೆಂದರು.
>
> **–ಡಾ.ವಿಶ್ವನಾಥ ಪಾಟೀಲ**
> **ಪಕ್ಷೇತರ ಅಭ್ಯರ್ಥಿಗಳು,**
> **ಬೈಲಹೊಂಗಲ ಮತಕ್ಷೇತ್ರ.**

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089